ಕೊರವಂಜಿ

A ANANTHIAH

ಸಂಪುಟ ೧೧ ಮೇ ೧೯೫೨ ಸಂಚಿಕೆ ೨

ಕುಹಕಿಡಿಗಳು

ಪ್ರಧಾನ ಸಚಿವರು ಮೈಸೂರು ರುಮಾಲನ್ನು ಧರಿಸುತ್ತಿದ್ದಾರಂತೆ. ಕಾರಣ ವಾದರೂ ಏನು? ಎಂದೊಬ್ಬರು ಕೇಳಿದ್ದಾರೆ.

—ಕಾರಣ ಗೊತ್ತಿಲ್ಲವೇ? ಇದ್ದ ಟೋಪಿ ನಿಮಗೆ ಹಾಕಿದ್ದರಿಂದ.

* * *

ವರಮಾನ ತೆರಿಗೆ ಕಛೇರಿಗೆ ಬೆಂಕಿ ಬಿದ್ದಿತಂತೆ.

—ಆದರೆ ಸಾಕಷ್ಟು ಅನುಕೂಲ ಆಗುವ ಮೊದಲೇ ಅಗ್ನಿ ನಿವಾರಕ ದಳದವರು ಬೆಂಕಿ ಆರಿಸಿದರಂತೆ.

* * *

ಪ್ರಾಂತೀಕ ಮುಖಂಡರಲ್ಲಿ ಹಲವಾರು ಜನ

"ಅಯ್ಯೋ! ನಾವೂ ಮೊರಾರ್ಜಿ ದೇಸಾಯಾಗಿದ್ದರೆ"

ಅನ್ನುವ ಹಾಡು ಹಾಡುತ್ತಿದ್ದಾರಂತೆ.

* * *

ಅಕ್ಕಿಬೆಲೆ ಹೆಚ್ಚಿದಮೇಲೆ, ಬಟ್ಟೆ ಕೊಳ್ಳೋರೇ ಇಲ್ಲವಂತೆ—

—ಹೊಟ್ಟೆಗೆ ಹಿಟ್ಟಿಲ್ಲದೆ ಇದ್ದರೆ, ಜುಟ್ಟಿಗೆ ಮಲ್ಲಿಗೆ ಅಲ್ಲದೆ, ಸೆಣಕಲ ಸೊಂಟಕ್ಕೆ ದಟ್ಟಿ ಕೇಳ್ತಾರೆಯೇ?

* * *

"ನಾನೊಂದು ಪುರಾತನ ಕಾಗೆ" ಅಂದರಂತೆ ರಾಜಾಜಿ.

—ಇನ್ನೂ ಆಶೆ—ತನ್ನ ಗೂಡಿನಲ್ಲಿ ಕೋಗಿಲೆ ಮೊಟ್ಟೆ ಇಡುತ್ತೆ ಅಂತ.

* * *

ಪೆಪ್ಸು ಸಚಿವ ಸಮಸ್ಯೆ ನೋಡಿದಮೇಲೆ—ನಮ್ಮ ಹಾಸ್ಟೆಲ್ ಹುಡುಗರೇ ವಾಸಿ —ಗೋಲಿ ಆಡೋವಾಗ ಬದ್ದನ್ನು ಖರಾಬು ಮಾಡುವುದಿಲ್ಲ ಎಂದು ಕಾಗದ ಬರೆದಿದ್ದಾರೆ ಒಬ್ಬಾತ.

* * *

ಭಾರತದ ರೈಲ್ವೆ ಪೋರ್ಟರ್ ಕೆಲಸಕ್ಕೆ ಸಂಸ್ಥಾನಗಳ ಹಲವಾರು ಪದವೀಧರ ಮಾಸ್ತರುಗಳು ಉಮೇದುವಾರರಾಗಿದ್ದಾರಂತೆ.

—ಓದಿದಾಕ್ಷಣ ಬುದ್ಧಿ ಹೋಯಿತು ಅನ್ನೋದನ್ನ ಇದು ಸುಳ್ಳುಗೊಳಿಸುತ್ತೆ ಅಲ್ಲವೆ?

* * *

ಪೂರ್ವಕಾಲದ ಛಾಯಾ ಚಿತ್ರಗಳನ್ನೂ ತೆಗೆಯ ಬಲ್ಲ ಕ್ಯಾಮರಾವನ್ನ ಒಬ್ಬಾತ ಕಂಡು ಹಿಡಿದಿದ್ದಾನಂತೆ.

—ಯಾಕೇ! ನಮ್ಮ ಕ್ಯಾಮರಾ ತೆಗೆದ ಚಿತ್ರಗಳೆಲ್ಲವೂ ಪೂರ್ವಕಾಲದವೇ? ಅಲ್ಲವೇ?

* * *

ಪಾನನಿರೋಧದ ವಿಚಾರದಲ್ಲಿ ಗಣಿ ಪ್ರದೇಶದಲ್ಲಿ ಜನರ ಅಭಿಮತ ತೆಗೆದು ಕೊಳ್ಳುತ್ತಿದ್ದಾರಂತೆ—

—ಈಗ ಅಲ್ಲಿ ಬಾಯಾರಿದ್ದಾಗ ಜನಾಭಿಮತ ತೆಗೆದುಕೊಂಡರೆ ಎಲ್ಲರೂ ಪಾನ ನಿರೋಧ ಬೇಡ ಅಂತ ಒಣಗಿದ ಕೊರಲಲ್ಲಿ ಹೇಳೇ ಹೇಳುತ್ತಾರೆ.

ಅದರ ಒದಲು—ಅವರಿಗೆಲ್ಲಾ ಚೆನ್ನಾಗಿ ಕುಡಿಸಿ ಜನಾಭಿಪ್ರಾಯ ಕೇಳಿದರೆ ಪಾನನಿರೋಧಬೇಕು ಅಂತ ಸಿಡಿವ ತಲೆಯಿಂದ ಅಂದೇ ಅನ್ನುತ್ತಾರೆ ಅಲ್ಲವೇ?

O

ಉರಿಗಾಳು

ಮೈಸೂರು ಸರ್ಕಾರದ ವಾರ್ತಾ ಶಾಖೆಯ ಮುಖ್ಯಾಧಿಕಾರಿಗಳ ಕಚೇರಿಯಿಂದ ಏಪ್ರಿಲ್ ೧೦ನೆ ತಾ|| ಹೊರಟಿರುವ ಪ್ರಕಟಣೆಯೊಂದರಲ್ಲಿ ಬೆಂಗಳೂರನ್ನು ಚೆಂಗಳೂರು ಎಂದು ಕರೆಯಲಾಗಿದೆ. ಚೆಂಗಲರಾಯರೆಡ್ಡಿಯ ಅಧಿಕಾರ ಮುಗಿದು ಕೆಂಗಲ್ ಹನುಮಂತಯ್ಯನವರು ಬಂದಮೇಲೆ, ಕೆಂಗಳೂರು, ಎಂದು ತಿದ್ದಬೇಕಲ್ಲವೆ?

*　　　*　　　*

ನಮ್ಮ ಮಂತ್ರಿ ಮಂಡಲದವರು ಸತ್ಯದ ಹಾದಿಯನ್ನು ತುಳಿಯಲೇ ಬೇಕು (ಪತ್ರಿಕೆ) ತುಳಿದುಬಿಟ್ಟರೆ, ಗತಿ ಏನು?

*　　　*　　　*

ಹಲವು ಕನ್ನಡ ಪತ್ರಿಕೆಗಳು ಹೊಸ ಮಂತ್ರಿಗಳನ್ನು ಕುರಿತು ಬರೆಯುವಾಗ, ಅವರನ್ನು "ಮಂತ್ರಿವರ್ಯರು" ಎಂದೂ, ಹಲವು "ಸಚಿವೋತ್ತಮರು" ಎಂದೂ ನಿರ್ದೇಶಿಸುತ್ತಿರುವುದು ಕೇವಲ ಅಭ್ಯಾಸಬಲದಿಂದ ಮಾತ್ರ ಎಂದು ತಿಳಿದು ಬಂದಿದೆ.

*　　　*　　　*

ಆಹಾರಧಾನ್ಯಗಳ ಬೆಲೆಯನ್ನು ಏರಿಸಿದ್ದಕ್ಕಾಗಿ ಅದನ್ನು ಪ್ರತಿಭಟಿಸಿ ಹೇಳಿಕೆಗಳನ್ನಿತ್ತಿರುವವರಲ್ಲಿ ಅನೇಕರು ರೇಷನ್ ಧಾನ್ಯಗಳನ್ನು ತಿನ್ನುವವರೇ ಅಲ್ಲ (ಟೀಕೆ) ಅದನ್ನು ತಿಂದಮೇಲೆ, ಎರಡು ಬಗೆಯಲು ತ್ರಾಣವೆಲ್ಲಿಂದ ಬರಬೇಕು?

*　　　*　　　*

"೧೨೮೭ ಎಕರೆಗೆ ಬೆಳೆ ರೋಗ ತಗುಲಿತು" (ವರದಿ) ನಮ್ಮ ಮನೆ ಮಕ್ಕಳಿಗೂ ಈ ಬೆಳೆಯುವ ರೋಗ ತಗುಲಿದೆ.

*　　　*　　　*

"ಆಕಾಶವಾಣಿ : ೯-೪೫, ಶ್ರೋತೃಗಳು ಕೇಳಿದ ಹಾಡುಗಳು"........ಕೇಳಿ ಕೇಳಿ ಬೇಜಾರಾಗಿಹೋಗಿದೆ, ಮತ್ತೆ ಯಾಕೆ ಅವನ್ನೇ ಹಾಕುತ್ತಾರೆ?

*　　　*　　　*

"ಪರಿಸ್ಥಿತಿ ಅನುಕೂಲಿಸಿದರೆ ಚರ್ಚಿಲ್-ಸ್ಟಾಲಿನ್ ಭೇಟಿ"....ಚರ್ಚಿಲ್ಲನ್ನೂ ಭಾರತದ ರಾಯಭಾರಿಯಾಗಿ ನಾವು ನಿಯಮಿಸಿದರೆ........?

*　　　*　　　*

ಅಸೆಂಬ್ಲಿ ಸಭಾಭವನದಲ್ಲಿ ೧೦೦ ಮಂದಿಗೆ ಕೂಡಲು ಆಸನ ಸೌಕರ್ಯ ಅಳವಡಿಸಬೇಕಾಗಿರುವುದರಿಂದ ಮೊದಲ ಅಧಿವೇಶನವು ಜೂನ್ ತಿಂಗಳಲ್ಲಿ ಸೇರುವುದು....

ಚುನಾವಣೆಗೆ ನಿಂತವರು ಅಷ್ಟರವರೆಗೆ ನಿಂತೇ ಇರಬೇಕೆ? ೧೦೦ ಮಂದಿಯೂ ಸಭಾ ಭವನದಲ್ಲಿ ಕೂತೇ ಇರುತಾರೆಯೆ?

* * *

"ನಮ್ಮ ಹುಡುಗ ಎಲ್ಲೋ ಹೋಗಿಬಿಟ್ಟಿದ್ದಾನೆ. ಪತ್ತೆ ಹಚ್ಚಿ ಕರೆತಂದವರಿಗೆ ಬಹುಮಾನ" (ಜಾಹಿರಾತು) ಯಾವುದೋ ಸ್ಕಾಲರ್ಷಿಪ್ ಹೊಡೆದು ಅಮೇರಿಕಾಕ್ಕೆ ತೆರಳಿರಬಹುದು, ವಿಚಾರಿಸಿ.

* * *

ಫೇಲಾದ ವಿದ್ಯಾರ್ಥಿಗಳ ಮೂರನೆಯ ವಾರ್ಷಿಕೋತ್ಸವವನ್ನು, ಪರಿಕ್ಷಾ ಫಲಿತಾಂಶಗಳು ಹೊರಬಿದ್ದ ದಿನವೇ ನಡೆಸಲು ಏರ್ಪಾಟುಗಳು ಆಗುತ್ತಿವೆಯಂತೆ.

* * *

ಬೇಲೂರಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಲನ ಗಾಯಕರೊಬ್ಬರ ಪ್ರಾರ್ಥನೆಯಿಂದ ಪ್ರಾರಂಭವಾಗುವುದಂತೆ ..ಏಕೆ? ಶಿಲಾಬಾಲಿಕೆಯರು ಸಾಲದೆ?

* * *

"ಬಡವನ ದಾನವು ಬಹಳ ಶ್ರೇಷ್ಠವಾದುದು" (ಭಾಷಣ) ನಮ್ಮ ದೇಶ, ಲಕ್ಷಾಂತರ ಬಡವರನ್ನು ದಾನಮಾಡಲು ಸಿದ್ಧವಾಗಿದೆ.

* * *

(ಭಾಷಣ) ರೈತರ ಮತ್ತು ಬಡವರ ಹೆಸರಿನಲ್ಲಿ ಗೋಳಾಟ ಹೂಡುವ ಪಟ್ಟಣಗಳ ಮುಖಂಡರು, ಪೂರ್ವಭಾವಿಯಾಗಿ ಹಳ್ಳಿಗಳಿಗೆ ಹೋಗಿ, ಜನರ ಕಷ್ಟ ನಿವಾರಣೆಗಾಗಿ....ಭಾವಿಗಳನ್ನು ತೋಡಲಿ.

* * *

ಸಬ್ಸಿಡಿಯನ್ನು ಮತ್ತೆ ಪಡೆದರೆ, ರೈಲ್ವೆದರ, ಪೆಟ್ರೋಲ್ ಬೆಲೆ ಏರಿಸಬೇಕಾಗಿರುವುದರಿಂದ ಬಸ್ ದರ, ಹೊಗೆಸೊಪ್ಪಿನ ಮೇಲಿನ ಸುಂಕ ಹೆಚ್ಚಿಸುವುದರಿಂದ ಸಿಗರೇಟ್, ಬೀಡಿ, ಕಡ್ಡಿಪುಡಿ ದರ—ಇವು ಹೆಚ್ಚುವುದೆಂದೂ, ಆವಾಗ, ಪ್ರತಿಭಟನಾ ಸಭೆಗಳನ್ನು ಇನ್ನೂ ಹೆಚ್ಚು ವಿಜೃಂಭಣೆಯಿಂದ ನಡೆಸಬಹುದೆಂದೂ ಹಲವರು ಯೋಚಿಸುತ್ತಿರುವರಂತೆ.

* * *

"ನಗರ ಪಿತೃಗಳೆಲ್ಲರೂ ಒಂದೇ ಪಕ್ಷದವರಾಗಬೇಕು"........ಪಿತೃಪಕ್ಷದಲ್ಲಿ.

* * *

ವಿದ್ಯಾಭ್ಯಾಸ ಪದ್ಧತಿಯಲ್ಲಿ ತೀವ್ರವಾದ ಬದಲಾವಣೆಗಳನ್ನು ಕಾರ್ಯರೂಪಕ್ಕೆ ತರಬೇಕೆಂಬ ಹಂಬಲ ಸರ್ಕಾರಕ್ಕಿದೆ (ಭಾಷಣ) ತಾವು ಅಭ್ಯಾಸಮಾಡುವ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಆಗಲೇ ತೀವ್ರ ಬದಲಾವಣೆಗಳನ್ನು ಹಲವು ವರ್ಷಗಳಿಂದ ಮಾಡಿಕೊಂಡಿದಾರೆ.

ಕೊರವಾವಲೋಕನ

— —

ಧೂಳಿನ ಬಿರುಗಾಳಿ ಆ ಸಾಯಂಕಾಲ ಕ್ಲಬ್ಬಿನಮುಂದೆ ಬಲುಜೋರಾಗಿ ಬೀಸುತ್ತಿತ್ತು. ಆದರೆ ಒಮ್ಮಿಂದೊಮ್ಮೆ ಅದರ ಬಿರುಸು ಕ್ಲಬ್ಬಿನೊಳಕ್ಕೆ ಬಂತು. ಯಾಕಪ್ಪಾ! ಹೀಗಾಯ್ತು ಅಂತ ಅನ್ನೋಹೊತ್ತಿಗೆ ಕೊರವ ಕಾಣಿಸಿದ. ಬಿರುಗಾಳಿ ಹಿಂದೇನೇ ಅವನೂ ಬಂದು ನನ್ನ ಬೆನ್ನುಗುದ್ದಿ "ಮೂರುಜನ ಡೆಪ್ಯುಟಿ ಸಚಿವರು, ನಾಲ್ಕು ಜನ ಪಾರ್ಲಿಮೆಂಟರಿ ಸೆಕ್ರಿಟೆರಿಗಳು" ಅಂದ. ಊರು ಮೇಲೆ ಊರು ಬಿದ್ದರೇನು, ದುಬಟಿ ಸಚಿವರ ಮೇಲೆ ಪಾ! ಸೆಕ್ರಿಟೆರಿಗಳು ಬಿದ್ದರೇನು? ನನಗೆ, ಅಂತ ನನ್ನ ಪೆಟ್ಟುಬಿದ್ದ ಬೆನ್ನನ್ನ ಮೆಲ್ಲಗೆ ಕುರ್ಚಿಗೆ ಮಾಲೀಷ್ ಮಾಡಹತ್ತಿದೆ.

ಇದನ್ನೂ ನೋಡಿದ ಕೊರವನ ಮುಖ ಶಕುಂತಲೆಯನ್ನು ಗಂಡನ ಮನೆಗೆ ಕಳುಹುವ ಕಣ್ವ ಮುನಿಯ ಮುಖದಂತಾಯಿತು. ಅದನ್ನೂ ನೋಡಿ "ಹೆಂಗರುಳಿನ ಕೊರವನ ಮನಸ್ಸು ನೋಯಿಸಬಾರದಿತ್ತು" ಎಂದಂದುಕೊಂಡು ಅವನ ತಾಪಶಮನ ಮಾಡಲು ಕೇಳಿದೆ" ಅದು ಹೇಗೆ ಗೊತ್ತು ನಿನಗೆ ಅಂತ. ಆಗಂದ ಅವ ಸಾವಧಾನ ವಾಗಿ.

"ಇವತ್ತು ತಿಳಿಯಿತು ಸರ್ಕಾರದವರು ಮೂರು ಆಟೋ ರಿಕ್ಷಾ—ನಾಲ್ಕು ಸೈಕಲ್ ರಿಕ್ಷಾ ಕೊಂಡಿದ್ದಾರೆ ಅಂತ. ಮೂರು ಆಟೋ ರಿಕ್ಷಾ ಮೂವರು ಯುವಕ ಡೆಪ್ಯುಟಿ ಮಿನಿಸ್ಟರುಗಳಿಗೆ—ನಾಲ್ಕು ಸೈಕಲ್ ರಿಕ್ಷಾ ನಾಲ್ಕು ಪಾರ್ಲಿಮೆಂಟರಿ ಬಚ್ಚಾ ಸೆಕ್ರಿಟರಿಗಳಿಗೆ." ಅಂತ ವಾದ ಹೂಡಿದ.

ಸರ್ಕಾರದ ಗುಪ್ತ ಯೋಚನೆಗಳು ಎಷ್ಟು ಸುಲಭವಾಗಿ ಬಹಿರಂಗವಾಗುತ್ತದೆ ಎಂಬುದು ಆಗಲೇ ಗೊತ್ತಾಗಿದ್ದು ನನಗೆ—ಹೇಗೆ ಎಂಬುದೂ ಅರ್ಥವಾಯಿತು.

* * *

ಯಾವ ಪತ್ರಿಕೆ ತೆಗೆದುಕೊಳ್ಳಲೀ ಒಂದಲ್ಲಾ ಒಂದು ಸಂಸ್ಥಾನದಲ್ಲಿ ದೇಶ ಸೇವೆಗೆ ಟೊಂಕಕಟ್ಟಿನಿಂತ ಸಚಿವರ ಸುದ್ದಿಯೇ ಸುದ್ದಿ. ದೇಶದ ವಾತಾವರಣ ಅಷ್ಟು ದೇಶಭಕ್ತಿಯಿಂದ ಕೂಡಿದಂತಿತ್ತು. ಅದನ್ನೇ ಕೊರವ ವಿಶದೀಕರಿಸುತ್ತಿದ್ದ, ಕ್ಲಬ್ಬಿನಲ್ಲಿ ಆ ಹನಿ ಹಾಕಿದ ಸಾಯಂಕಾಲ.

ಕೊರವ ಹೇಳಿದ್ದೆಲ್ಲಾ ಕೇಳಿದಮೇಲೆ ಎಲ್ಲರೂ ಸಾಮಾನ್ಯವಾಗಿ 'ಹ್ಞೂ' ಅಂತ ಶಬ್ದ ಮಾಡದೆ ಮುಖದಲ್ಲಿ ಸಮ್ಮತಿ ತೋರಿಸುತ್ತಾರೆ. ಆದರೆ ಆ ಸಾಯಂ ಕಾಲ ಗಿರಣಿ ರಾಮಸ್ವಾಮಿ 'ಹ್ಞೂ' ಅಂತ ಎಲ್ಲರೂ ಬೆಚ್ಚುವಂತೆ ಅಂದ.

ಒಂದು ಹುಬ್ಬು ಎತ್ತಿದರೆ, ಕುರುಕ್ಷೇತ್ರದ ಕದನಕ್ಕೆ ಮುಂಚೆ 'ಶಂಖಂ ದಧ್ಮೌ ಪ್ರತಾವಾನ್' ತರಹ, ಕದನ ಮುನ್ಸೂಚನೆ.

ಬೇಸಿಗೆಯಲ್ಲಿ ಹನಿ ಹಾಕಿದ ಸಾಯಂಕಾಲ. ಹುಲ್ಲೆ ಹುಲೀನ ಕೆಣಕೋ ವಾತಾವರಣ, ಗಂಡ ಹೆಂಡತೀಗೆ ಹುಕುಂ ಕೊಡುವ ರಸನಿಮಿಷ. ಗಿರಣಿ ರಾಮ್ಸಾಮಿ ಅಂದೇ ಬಿಟ್ಟ.

"ಹೌದು, ಕೊರವ ಹೇಳಿದ್ದು ದಿಟ. ದೇಶದಲ್ಲಿ ಊರಲ್ಲಿ ಕೇರೀಲಿ ಎಲ್ಲೆಲ್ಲೂ ದೇಶಾಭಿಮಾನ, ತುಳುಕುತ್ತಿದೆ. ಇವತ್ತು ಗಿರಣಿ ಮುಚ್ಚಿದ ಹೊತ್ತು. ಕೆಲಸಗಾರ ರೆಲ್ಲಾ ಹೊರಗೆ ಹೋಗುತ್ತಿದ್ದಾಗ ಒಂದು ಚಿಕ್ಕ ವಯಸ್ಸಿನ ಕೂಲಿ ಹೆಂಗಸಿನ ಎದೆ ಬಲು ತುಂಬಿದಂತೆ ಕಾವಲುಗಾರನಿಗೆ ಕಾಣಿಸಿತು. ಗಿರಿಣಿಯಲ್ಲಿ ಬಟ್ಟೆ ಕಳ್ಳತನ ಹೆಚ್ಚಾಗುತ್ತಿದೆ ಈಗ. ಅದಕ್ಕೋಸ್ಕರ ಕಾವಲುಗಾರ ಅವಳನ್ನ ಗುಮಾನಿಮೇಲೆ ಹಿಡಿದು ನನ್ನ ಹತ್ತಿರ ಕರೆದುಕೊಂಡು ಬಂದ. ಸಮಾಚಾರ ಕೇಳಿ, ಸ್ತ್ರೀ ಸಹಾಯ ಕಳಿಗೆ ಹೇಳಿ ಕಳಿಸಿ ಅವಳ ಎದೆಯ ಹತ್ತಿರ ಮುಚ್ಚಿಟ್ಟ ಬಟ್ಟೇನ ಹೊರಕ್ಕೆ ತೆಗೆಸಿದೆ. ಕಳ್ಳಮಾಲುಸಹಿತ ಸಿಕ್ಕಿದಳು ಅಂತ ಬಾಯಿ ಚಪ್ಪರಿಸಿಕೊಳ್ಳುತ್ತಿದ್ದಾಗಲೇ—ಆ ಬಟ್ಟೆ ಗಂಟು ಬಿಚ್ಚಿದರು. ನೋಡಿದರೆ ಅದು ನಮ್ಮ ಭಾರತ ರಾಷ್ಟ್ರಧ್ವಜ.

ಮಂದಸ್ಮಿತ ವದನಾರವಿಂದೆ ಆಗ ಆ ಕೂಲಿ ಹೆಣ್ಣು. ನನ್ನ, ಸ್ತ್ರೀ ಸಹಾಯ ಕಳ ಪೆಚ್ಚುಮೋರೆಯನ್ನು ನೋಡಿ ಹೇಳಿದಳು.

ನನಗೆ ದೇಶಭಕ್ತಿ ತುಂಬಾ. ರಾಷ್ಟ್ರಧ್ವಜವನ್ನು ಎದೆಗಪ್ಪಿಕೊಂಡಿದ್ದರೇ ನನ್ನ ಹೃದಯ ಟಕಟಕ ಅನ್ನೋದು, ಇಲ್ಲದೇ ಹೋದರೆ ನಾನು ಸತ್ತಂತೆಯೇ ಎಂದಳು.

ಅದಕ್ಕೇ ನಾನು ಕೊರವನು ಹೇಳಿದ್ದಕ್ಕೆ 'ಹೂ' ಅಂತ ಕೇಳಿಸೋಹಾಗೆ ಹೇಳಿದ್ದು ಅಂದು ಮುಗಿಸಿದ ರಾಮ್ಸಾಮಿ.

* * *

ಶಕೆ—ಅಂದರೆ ಶಕೆ ಅವತ್ತು. ಕೂತ ಕುರ್ಚಿಯಿಂದ ಎದ್ದರೆ, ಕುರ್ಚಿನೂ ಮೇಲಕ್ಕೇಳುತ್ತಿತ್ತು. ಅಂತಹ ಶಕೆ. ಸಿ. ಡಿ. ಮೂಲೇಲಿ ಯಾವುದೋ ಪತ್ರಿಕೇನ ಓದುತ್ತಾ ಒಬ್ಬನೇ ಕುಳಿತಿದ್ದ ಕ್ಲಬ್ಬು ವರಾಂಡಾವಲ್ಲಿ. ನಾಲ್ಕೈದು ಜನ ಅವನ ಮುಖ ಭಾವ ನೋಡಿ ನಮಗೆಲ್ಲಿ ಈ ಸೂತಕ ಅಂತ ತಲೆ ಬಾಗಿದಂತೆ ನಮಸ್ತೆ ಮಾಡಿ ಮುಂದೆ ಹೊರಟುಹೋದರು.

ಆಗಲೇ ಕೊರವ ಬಂದಿದ್ದು. ಸಿ. ಡಿ. ಮುಖ ನೋಡಿ ಏನನ್ನಿಸಿತೋ ಪಾಪ! ಕಪ್ಪೆ ಕಂಡ ಹಾವಿನಹಾಗಿರಬಹುದು. ಕಪ್ಪೆ ಕಷ್ಟ ನಿವಾರಣೆ ಮಾಡೋಣ

ಅಂತ ಹಾವು ಹೋದಹಾಗೆ ಅವನ ಬಳಿ ಹೋಗಿ ಒಂದು ಕುರ್ಚಿ ಎಳೆದು ಕೂತು ಕೊಂಡ.

"ಏನ್ ಸಿ. ಡಿ. ಇಷ್ಟು ಶಕೆ ? ಮುಖದ ಛಾಯೇನೆ ಬದಲಾಯಿಸುತ್ತೆ. ಕೆಟ್ಟ ಕನಸು ಕಂಡಹಾಗಾಗುತ್ತೆ" ಅಂದ ಕೊರವ.

ಸಿ. ಡಿ. ಗೆ ಅಳುವೇ ಬಂದು ಬಿಡ್ತು. ಹೊರಗೋ ಶಕೆ. ಮನೆಗೆ ಹೋದರೆ ಇದ್ದೊಬ್ಬ ಮಗ, ಕೆಂಪು, ಕುಡುಗೋಲು, ಸುತ್ತಿಗೆ, ಅಂತ ಎಲ್ಲೋ ಹೋದವ ಇವತ್ತು ಪೋಲೀಸರ ಕೈಗೆ ಸಿಕ್ಕಿ ಜೈಲು ಅಂತ ಸುದ್ದಿ. ಈ ಕೊರವನ ಕುಚೇಷ್ಟೆ ಅವನಿಗೆ ಬೇಕೇ? ಅದಕ್ಕೇ ಕೊರವನಿಗೆ ಹೇಳಿದ. ಹೀಗೆ ಹೀಗೆ ಆಯಿತು. ಅಪ್ಪ ಬಿಟ್ಟ ಆಸ್ತೀಲಿ ಮೊಮ್ಮಗ ಕೂಡ ರಾಮು ಕೃಷ್ಣ ಅಂತ ಸುಖವಾಗಿರಬಹುದು. ನನ್ನ ಮಗನಿಗೇನು ಬೇನೆ ಬಂತೋ ಹೀಗಾಯ್ತು. ಇದಕ್ಕೆ ಕಾರಣವಾದರೂ ಹೇಳು ಅಂದ.

ಕೊರವ ಆಗ ಒಂದೆರಡು ನಿಮಿಷ ಅವಾಕ್ಕಾಗಿ ಆಮೇಲಂದ. ಅಲ್ಲಾ! ಸಿ. ಡಿ. ನಮ್ಮ ದೇಶದಲ್ಲಿ ಯುವಕರ ಪಾಡೆಲ್ಲಾ ಹೀಗೇ ಇನ್ನುಮೇಲೆ. ಅವರು ತಿನ್ನೋದು ನೋಡು ಅಮೆರಿಕಾ ಗೋಧಿ, ಕೆನಡಾದ ಮೈಲೊ, ಬರ್ಮಾ ಅಕ್ಕಿ— ಹಾಕೋ ಬಟ್ಟೆ ಎಲ್ಲಾ ಹೊರಗಿನದು, ಓದೋ ಪುಸ್ತಕ ಎಲ್ಲಾ ಇಂಗ್ಲೀಷಿನದು ಹೀಗಾಗಿ ಅವಕ್ಕೆ ನಮ್ಮ ದೇಶ ಅಂತ ರಕ್ತಗತವಾಗಿರೋದು ಏನು. ಒಂದೂ ಇಲ್ಲ. ಇದೆಲ್ಲಾ ಒಳ್ಳೇದಕ್ಕೆ ನೋಡು. ಮೈಸೂರಿನವ ಅನ್ನೋ ಭ್ರಾಂತು ಹೋಗಿ ಭಾರ ತೀಯ ಅಂತ ಆಗಿಲ್ಲವೇ? ಆ ಭ್ರಾಂತು ಹೋಗಿ ಏಷ್ಯಾದವ ಅಂತ ಆಗುತ್ತೆ. ಆ ಭ್ರಾಂತೂ ಹೋಗಿ, ಲೋಕ ಪ್ರಜೆ ಅಂತ ಆಗುತ್ತೆ. ಅದೂ ಹೋಗಿ, ನಾವೆಲ್ಲಾ ಮಾನವರು ಅಂತ ಆಗುತ್ತೆ, ಆಗ ರಾಮರಾಜ್ಯ ಎಲ್ಲರೂ ಅಣ್ಣತಮ್ಮಂದಿರಹಾಗೆ ಇರ್ತಾರೆ. ಸದ್ಯಕ್ಕೆ ಆ ಹೊತ್ತಿಗೆ ನೀನೂ ನಾನೂ ಇಲ್ಲಿಲ್ಲದೇ. ಇದ್ದರೆ ಸಾಕು ಅಲ್ಲವೇ ಅಂತ ವೇದಾಂತ ಹೇಳಿದ.

ಸಿ. ಡಿ. ಮುಖ, ಕೊರವನ ಮುಖದಹಾಗೇ ಆಯಿತು.

* * *

"ಜಾರುವ ಹಾದಿಯಲ್ಲಿ ಬಲು ಚೆನ್ನಾಗಿದೆ" ಅಂದ ಕೊರವ. ಅವನ ಮಾತೇ ಹಾಗೆ. ಮೊದಲಿಲ್ಲ ಕೊನೆಯಿಲ್ಲ. ಎಲ್ಲೋ ಏನೋ ಅಂದು ಬಿಡ್ತಾನೆ. ಆಕಾಶ ವಾಣಿಯ ಕ್ವಿಸ್ ತರಹ.

"ಎಲ್ಲಿದೆಯೋ ಈ ಜಾರುವ ಹಾದಿ"

"ನೀನೂ ಪ್ರಗತಿಗೆ ಸೇರಿದೆಯೇನೋ"

" ಈ ಮುಪ್ಪಿನಲ್ಲಿ ನಿನಗೇನು ಬಂತೋ ಈ ಪ್ರಾಯದ ರೋಗ"

" ನಿನ್ನ ಹೆಂಡತೀಗೆ ಗೊತ್ತೆ ಈ ವಿಚಾರ"

" ಮಾಡೋದು ಮಾಡಿದೆ. ಹೇಳಿಕೊಳ್ಳೋದಾದರೂ ಯಾಕೆ?"

ನಾಲ್ಕಾರು ಕಡೆಯಿಂದ ನಾಲ್ಕಾರು ಪ್ರಶ್ನೆಗಳು ಒಟ್ಟಿಗೆ ಎದ್ದುವು. ಮುಖ್ಯ ತಾತ್ಪರ್ಯ ಒಂದೇ ಅನ್ನಿ.—ನಿಮಗೆ ಅನ್ನಿಸಿದ ಹಾಗೆ ನಮಗೂ ಅನ್ನಿಸಿತು.

ಆಗ ಕೊರವ ಸಾವಧಾನವಾಗಿ, ಬಲ ಹುಬ್ಬಿನಮೇಲೆ ಬೆರಳಾಡಿಸುತ್ತಾ ಹೇಳಿದ "ನಾನು ಹೇಳಿದ್ದು, ಹೊಸ ಕಾದಂಬರಿ ವಿಷಯ. "ಕಾರಂತರ ಜಾರುವ ಹಾದಿಯಲ್ಲಿ" ಅದರ ವಿಚಾರ. ಬಲು ಚೆನ್ನಾಗಿದೆ ಅಂತ. ನಿಮ್ಮ ನಿಮ್ಮ ದುಷ್ಟ ಮನಸ್ಸಿಗೆ ಸರಿಯಾಗಿ ಪೋಲಿ ನಾಲಿಗೆಯಲ್ಲಿ ನೀವು ಅಂದಿರಿ ಅಂತ ನನಗೆ ದುಃಖವಿಲ್ಲ ಆದರೆ ಕಾಸು ಕೊಟ್ಟು ಕೊಂಡು ಓದಿ" ಅಂದ.

* * *

ಈ ಜಟ್ಕಾ ಸಾಬರ ಮಾತು ಕೆಲವುವೇಳೆ ಅರ್ಥವೇ ಆಗುಲ್ಲ ಅಂದ ಕೊರವ. ' ಯಾಕೆ ' ಅಂದೆ ನಾನು.

ನೋಡು ನಿನ್ನೆ ಪೌರ್ಣಮಿ ರಾತ್ರಿ ಸಿನಿಮಾ ಮುಗಿಸಿಕೊಂಡು ಒಂದು ಜಟ್ಕಾ ಗೊತ್ತು ಮಾಡಿಕೊಂಡು ಮನೆಗೆ ಹೊರಟೆ—ನನ್ನ ಕಾರು ರಾತ್ರಿ ಓಡೋ ಜಾತಿಯದಲ್ಲ—ಅದಕ್ಕೇ—ದಾರಿಂದುದ್ದಕ್ಕೂ ಸಾಬಿ ಏನೋ ಹಾಡು ಪಠುಕುತಾನೇ ಇದ್ದ.

' ಏನು ಸಾಬಿ ಇಷ್ಟು ಖುಷಿ' ಎಂದೆ

'ಅಲ್ನೋಡು ಸಾಮಿ' ಅಂತ ಚಂದ್ರನ್ನ ತೋರಿಸಿದ.

ಇಲ್ನೋಡು ಸಾಮಿ ಅಂತ ಚಾಟಿ ತೋರಿಸಿದ. ಆಮೇಲಿಂದ ಈ ಚಾಟೀನ ಆ ಚಂದ್ರಕ್ಕೆ ಕಟ್ಟೆಗಾಡಿ ಹೊಡೀತಿದೀನಿ ಅಂದ. ನನಗೇನೂ ಅರ್ಥವಾಗಲಿಲ್ಲ. ಮನೆ ಸೇರಿದಾಗ ಬದುಕಿದೆ ಅಂದುಕೊಂಡೆ' ಅಂದ ಕೊರವ.

— O —

ಸೈನ್ಯ ದಳದವರು ಕೆಲಸಮಾಡಿದ ಜಾಗದಲ್ಲಿ ಕ್ಷಾಮ ತಲೆದೋರುತ್ತೆ ಎಂಬುವುದು ಚಾರಿತ್ರ್ಯಕ ನಿಜಾಂಶ.

—ತಲೆಕೆಳಕುಕಾಲ! ಕ್ಷಾಮ ತಲೆದೋರಿದ ಪ್ರದೇಶದಲ್ಲಿ ಈಗ ಸೈನ್ಯ ದಳದವರು ಸಹಾಯಕ್ಕೆ ನಿಂತಿದ್ದಾರೆ.

ಗುಪ್ತ ಪತ್ರ

ಎಷ್ಟೇ ಗುಟ್ಟಾಗಿದ್ದರೂ, ವಿಷಯ ಬಹಿರಂಗವಾಗಿ ಹೋಯ್ತು. ಸರ್ಕಾರಿ ರೂಲ್ಸು, ನನ್ನ ಉದ್ಯಮ, ಯಾವುದೂ ಫಲಕಾರಿಯಾಗಲಿಲ್ಲ. ಒಬ್ಬರಿಂದೊಬ್ಬರಿಗೆ, ಅವರಿಂದ ಇನ್ನೊಬ್ಬರಿಗೆ, ಹೀಗೆ ಕರ್ಣಾಕರ್ಣಿಕಯಾ, ಊರಿಗೆಲ್ಲ ಹಬ್ಬಿತು.

ಹೋದವಾರ, ನನಗೊಂದು ಪತ್ರ ಬಂತು, ಮಾವನವರ ತಮ್ಮನ ಅಳಿಯನಿಂದ; "ನಿಮ್ಮ ವಿಳಾಸಕ್ಕೆ ೨೩೦ ಕಿತ್ತಳೆಹಣ್ಣನ್ನು ಕಳುಹಿಸಲಾಗಿದೆ; ದಯವಿಟ್ಟು, ಅದರ ರುಚಿನೋಡಿ, ಹುಳಿಯಾದರೂ ಸಿಹಿಯಾದರೂ ಮೆಚ್ಚಬೇಕೆಂದು ಬಯಸುತ್ತೇನೆ" ಎಂದು ಬರೆದಿದ್ದ. ನಾನು ಬಸ್ ಸ್ಟಾಂಡಿಗೂ ರೈಲು ಸ್ಟೇಷನಿಗೂ ನಾಲ್ಕಾರು ಬಾರಿ ಓಡಾಡಿದೆ. ಹಣ್ಣಿನ ಬುಟ್ಟಿಯ ಸುದ್ದಿಯೇ ಸಿಗಲಿಲ್ಲ. ಮನೆಯಲ್ಲಿ ಇಬ್ಬರು ಮಕ್ಕಳಿಗೆ ಜ್ವರವಾಗಿದ್ದದ್ದರಿಂದ, ಕಿತ್ತಲೆಹಣ್ಣು ಒಳ್ಳೆಯ ಆಪದ್ಧನವಾಗಿ ದೊರೆಯುತ್ತದಲ್ಲಾ ಎಂದು ಯೋಚಿಸಿದೆ. ಆದರೆ, ಬುಟ್ಟಿ ಬರಲೇಇಲ್ಲ. ಅದು ಹುಳಿಯೋ ಸಿಹಿಯೋ ಎಂಬ ರುಚಿ ವಿಮರ್ಶೆಗೆ ಅವಕಾಶವೇ ದೊರೆಯಲಿಲ್ಲ. ಕ್ಲಬ್‌ಗೆ ಹೋದಾಗ ನನ್ನ ಪೇಚಾಟವನ್ನು ಕೃಷ್ಣರಾಯನೆದುರು ತೋಡಿಕೊಂಡೆ. ಅವನು ನಕ್ಕೇಬಿಟ್ಟ. ಅಯ್ಯೋ, ಮಂಕೆ, ಅಂತ ಬೈದೇಬಿಟ್ಟ. "ಆ ನಂಬರಿನ ವಿದ್ಯಾರ್ಥಿಯ ಉತ್ತರ ನಿನ್ನಲ್ಲಿಗೆ ಬಂದಿದೆ; ಹುಳಿಯಾದರೂ ಸಿಹಿಯಾದರೂ ಮೆಚ್ಚಿ, ೬೦ ನಂಬರ್ ತುಂಬು" ಅಂತ ಸೂಚನೆ ಕೊಟ್ಟು ಬರೆದಿದಾನೆ, ಇಷ್ಟು ಗೊತ್ತಾಗುವುದಿಲ್ಲವೇನೋ? ಎಂದ. ಎಲಾ, ಅಳಿಯ, ಅಂತ ನಾನು ಮೂಗಿನ ಮೇಲೆ ಬೆರಳಿಟ್ಟೆ. ಹುಳಿಯಾಗಿದ್ದರೂ, ಸಿಹಿ ಎಂದು ಮೆಚ್ಚಿದೆ, ಹುಡುಗ ಪಾಸಾದ.

ಅದರಾಚೆ ದಿನ, ಮತ್ತೊಬ್ಬರು, "ಜನ್ನ ಮಹಾಕವಿಯ ೪೩೮ನೆಯ ಜಯಂತ್ಯುತ್ಸವವನ್ನು ಕೊಂಡಾಡಬೇಕೆಂದಿದ್ದೇವೆ, ನೀವು ೫೫ ಪುಟಕ್ಕೆ ಕಡಮೆ ಇಲ್ಲದೆ ಒಂದು ಪ್ರಬಂಧವನ್ನು ಬರೆದು ಕಳುಹಿಸಿದರೆ, ಅಥವಾ, ಕಳುಹಿಸಲು ಒಪ್ಪಿದರೆ, ನಮಗೆ ಸಂತೋಷ. ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ನಾವು ಅರ್ಪಿಸುತ್ತೇವೆ" ಎಂದು ಬರೆದಿದ್ದರು. ಅದೇ ನಂಬರಿನ ವಿದ್ಯಾರ್ಥಿಗೆ ೫೫ ಆದರೂ ಕೊಟ್ಟು ಕಾಪಾಡಿ ಎಂಬುದೇ ಆ ಪತ್ರದ ಅರ್ಥವೆಂದು, ಕೃಷ್ಣರಾಯನ ಸಹಾಯವಿಲ್ಲದೆಯೇ, ನಾನು ಊಹಿಸಿದೆ, ಕಾಪಾಡಿದೆ. ಆ ಹುಡುಗನಿಗೂ, ಪಾಸು.

ಶುಕ್ರವಾರದ ಟಪಾಲಿನಲ್ಲಿ ಮೂರು ಪತ್ರಗಳು ಬಂದುವು. "ನಮ್ಮ ಕಂಪನಿಯಿಂದ ೮೫೪ನೆಯ ರಶೀತಿ ನಿಮಗೆ ಬಂದಿದೆಯಂತೆ. ದಯೆತೋರಿ, ಅದನ್ನು

ಜೋಪಾನವಾಗಿ ಇರಿಸಿಕೊಂಡು ಪರಾಂಬರಿಸಿ" ಎಂಬುದೇ ಮೊದಲನೆಯದು, ಸರಿ! ಅದರ ಅರ್ಥ ತಿಳಿಯಿತು. ಆ ನಂಬರನ್ನೂ ಪ್ರಯಾಸದಿಂದ ಪಾಸುಮಾಡಿಸಿದೆ. "ನಂ.೭೨೭ ನೆಯ ಬೀಡಿಯನ್ನು ಸೇದಿ ನೋಡಿದರೆ, ಅದರ ಪರಿಮಳಕ್ಕೂ ಅದರಿಂದಾಗುವ ಲಾಭಕ್ಕೂ ನೀವೇ ತಲೆದೂಗುವಿರಿ" ಎಂಬುದೇ ಎರಡನೆಯದು. ನಂ. ೭೨೭ ಬೀಡಿಯಲ್ಲ; ಉತ್ತರ ಪತ್ರಿಕೆ, ಎಂದು ನನಗೆ ತಿಳಿಯದೆ? ತಲೆದೂಗುವ ಭಾಗ್ಯವನ್ನು ಕಳೆದುಕೊಳ್ಳುವ ಮುಟ್ಠಾಳತನ ನನ್ನಲ್ಲಿರಲಿಲ್ಲ. ಆ ಕಟ್ಟನ್ನೂ ಆರಿಸಿ ತೆಗೆದು ನಂಬರು ತುಂಬಿದೆ. ಮೂರನೆಯ ಕಾಗದದಲ್ಲಿ, "ಊರಿನ ೬೬೬ ಜನ ಆರೋಗ್ಯವಾಗಿದಾರೆ ಎಂದು ಭಾವಿಸುತ್ತೇನೆ; ನೀವೇ ಅದರ ಉಳಿವಿಗೂ ಅಳಿವಿಗೂ ಕಾರಣಕರ್ತರು" ಎಂದು ಬರೆದಿತ್ತು. ಆ ಒಗಟನ್ನೂ ನಾನು ಬಿಡಿಸಿದೆ, ಹಾಕಿದೆ, ೬೬೬ಕ್ಕೆ ೬೬ ನಂಬರು. ನನಗೇನು? ನನ್ನ ಅಪ್ಪನ ಮನೆಯ ಗಂಟೆ? ಒಟ್ಟಿನಲ್ಲಿ, ಲೋಕ ಚೆನ್ನಾಗಿದ್ದರೆ, ಸಾಕು, ನನಗೂ ಕ್ಷೇಮ.

ನಿನ್ನೆ, ಕೋ ಆಪರೇಟಿವ್ ಸೊಸೈಟಿ ಮ್ಯಾನೇಜರಿಂದ ಒಂದು ಅರ್ಜಂಟ್ ಕಾಗದ ಬಂತು. "ಕೆಲ ದಿನಗಳಿಂದ ಬಾಕಿ ನಿಂತಿರುವ ೩೪೮ಕ್ಕೆ ಶೀಘ್ರದಲ್ಲೇ ತಕ್ಕ ವ್ಯವಸ್ಥೆಮಾಡಬೇಕು" ಎಂದಿದ್ದರು. ಹೋಗಲಿ, ಕೈಯಲ್ಲಿ ಸಾಧ್ಯವಿರುವಾಗ ಮಾಡೇ ಬಿಡೋಣ, ಎಂದು ೩೪೮ನೇ ನಂಬರಿನ ಪೇಪರನ್ನು ಹುಡುಕಿ, ಆ ಹುಡುಗನಿಗೂ ತೆತ್ತೆ ಒಂದು ಅರವತ್ತೆರಡು, ಇನ್ಷೂರನ್ಸ್ ಏಜಂಟರ ಕಚೇರಿಯಿಂದಲೂ ಒಂದು ಕಾರ್ಡು ಬಂತು. "ನಂ. ೪೯೬ ನೆಯ ಪಾಲಿಸಿ ಕುರಿತು ನಿಮಗೆ ನೆನಪುಕೊಡಲಿಚ್ಛಿಸುತ್ತೇನೆ" ಎಂದು ಟೈಪ್ ಹೊಡೆದಿದ್ದರು. ಭಲಾ! ನಿನ್ನದೂ ಇದೇ ವರಿಸೇನೆ? ೪೯೬ ಯಾರು? ನಿನ್ನ ಮಗನೋ? ನಿನ್ನ ಭಾವಮೈದನೋ? ಯಾರಾದರೂ ಆಗಲಿ, ಕೊಡುತ್ತೇನೆ ತಕೊ ಎಪ್ಪತ್ತೆಂಟು, ಅಂತ ಆ ಪೇಪರಮೇಲೂ ತುಂಬಿದೆ, ನಂಬರು.

ಒಬ್ಬರ ಮೇಲೆ ದಾಕ್ಷಿಣ್ಯ, ಇನ್ನೊಬ್ಬರ ಮೇಲೆ ಇಲ್ಲ, ಅಂತ ಏಕೆ? ಪಕ್ಷಪಾತವಿಲ್ಲದೆ, ಹುಡುಗರ ನಂಬರನ್ನ, ಎಷ್ಟೇ ಗುಪ್ತವಾಗಿಯಾದರೂ ಆಗಲಿ, ಯಾರು ಹೇಳಿದರೂ, ಹೇಗೆ ಬರೆದರೂ, ಆ ನಂಬರನ್ನು ಪಾಸುಮಾಡಿಸೇ ಬಿಡುವುದು, ಎಂದು ಸಂಕಲ್ಪಮಾಡಿದೆ. ಪುಣ್ಯಕೆಲಸಕ್ಕೆ ಇವತ್ತಿಲ್ಲದಿದ್ದರೂ, ನಾಳೆ ಫಲ ಉಂಟೇ ಉಂಟು.

ಇವತ್ತು ನನ್ನ ಖಾಸಾ ಅಳಿಯ ಬರೆದಿದಾನೆ, ಐದು ಮೂವತ್ತರ ಗಾಡಿಗೆ ಬರುತ್ತಾನಂತೆ. ಅಂದರೆ, ಅವನ ಅರ್ಥ ಏನು? ೫೩೦ನೆಯ ನಂಬರನ್ನು ಪಾಸುಮಾಡಿಸಿ, ಅಂತ, ಇರಬಹುದೆ? ಮಾಡಿಸೇ ಬಿಡೋಣ, ಯಾರಿಗೇನು ನಷ್ಟ? ಕೊಡೋಣ ಅವನಿಗೂ ಒಂದು ಎಪ್ಪತ್ತ ಮೂರು....

—ರೇವಣ್ಣ.

— ೦ —

ನಾನು ಮಾಡಿದ ಕೊಲೆ

ಹೌದು. ನಾನು ಕೊಲೆಪಾತಕ. ಖೂನಿಮಾಡಿದೆನು. ಕಳೇಬರ ನನ್ನ ಕೋಣೆಯ ಮೂಲೆಯಲ್ಲೇ ಬಿದ್ದಿದೆ, ನನ್ನ ಕಣ್ಣೆದುರಿಗೆ, ರಕ್ತದಲ್ಲಿ ತೊಯ್ದು. ಆ ಹೆಣ್ಣುಮಗಳ ಸಹವಾಸ ನನಗೆ ಅಸಹ್ಯವಾಯಿತು, ನನ್ನಲ್ಲಿ ಆಕ್ರೋಶವನ್ನುಂಟು ಮಾಡಿತು, ನನ್ನ ಕೋಪ ಕೆರಳಿತು, ಅರ್ಧ ಗಂಟೆಯ ಕಾಲದ ಹೊಡೆದಾಟದ ಅವ ಸಾನದಲ್ಲಿ ಆಕೆ ನೆಲಕ್ಕುರುಳಿದಳು. ಬಿದ್ದಮೇಲೂ ನಾನು,...ಹೌದು, ಅದನ್ನು ನಾನು ನಿಮ್ಮ ಮುಂದೆ ಒಪ್ಪಿಕೊಳ್ಳುತ್ತಿದೇನೆ, ನಾಚಿಕೆ ಇಲ್ಲದೆ ತಲೆ ಎತ್ತಿ ನಿಂತು ಒಪ್ಪಿಕೊಳ್ಳುತ್ತಿದೇನೆ,..ಆಕೆಯನ್ನು ಕಾಲಿಂದ ಒದ್ದು ಮತ್ತಷ್ಟು ಹಿಂಸಿಸಿದೆ.

ಹೆಂಗಸರಿಗೆ ಮಾತು ಹೆಚ್ಚು, ಎನ್ನುತ್ತಾರೆ. ಆದರೆ, ಆಕೆ ಆಡುವುದೆಲ್ಲ ಕೇವಲ ಒಂದೇ ಮಾತು, ಅವಳ ದನಿಯಲ್ಲಿ ಏರು ತಗ್ಗುಗಳಿದ್ದುವಾದರೂ, ಅದರ ವಿಷಯ ಒಂದೇ ಆಗಿತ್ತು. ನನ್ನ ಪ್ರಾಣ ತೆಗೆಯುತ್ತಿದ್ದಳು, ನನ್ನ ಕಿವಿಗೆ ಪುರಸತ್ತೇ ಕೊಡ ಲಿಲ್ಲ, ನನ್ನ ಸುತ್ತ ಸದಾ ಓಡಾಡಿ ನನ್ನನ್ನು ಕಾಡಿಸುವಳು. ರಾತ್ರಿ ಹಗಲು ಒಂದೇ ರಾಗ, ನಾನು ಕಚೇರಿಯಿಂದ ಬಂದಕೂಡಲೇ ಅವಳ ದನಿ ನನ್ನ ತಲೆಯೊಳಗೆ ಗುಂ ಗುಂ ಗಾನ ಮಾಡುವುದು, ನನಗೆ ಹುಚ್ಚು ಹಿಡಿದಂತಾಯಿತು. ನನ್ನಂತೆಯೇ ನೀವೂ ನೊಂದಿದ್ದರೆ, ನಿಶ್ಚಯವಾಗಿಯೂ ನೀವೂ ಖೂನಿಮಾಡುತ್ತಿದ್ದಿರಿ.

ಗೋಡೆಗೆ ಒರಗಿಕೊಂಡು ನನ್ನೆದುರು ಕೂತು, ಅವಳು ತನ್ನ ಬೇಡಿಕೆಯನ್ನು ಅದೇ ರಾಗದಲ್ಲಿ ದಿನವೂ ಹಾಡುವಳು. ಅವತ್ತು ನಾನು ಅವಳನ್ನು ಪಕ್ಕದ ಕೋಣೆಗೆ ಅಟ್ಟಿದೆ. ಅವಳು ಮತ್ತೆ ನನ್ನ ಕೋಣೆಗೇ ಬಂದಳು. ವಿಧಿ ಅವಳನ್ನು ಅವಳ ಅಂತ್ಯ ಮುಹೂರ್ತ ಸಮೀಪಿಸಿತೆಂದು ಎಚ್ಚರಿಸಿತೋ, ಏನೊ?

ಮೊದಲು ನಾನು ಅವಳನ್ನು ಬೀಸಣಿಗೆಯಿಂದ ಹೊಡೆದೆ; ಅವಳು ಅದನ್ನು ಲೆಕ್ಕಿಸಲೇ ಇಲ್ಲ. ಏಟು ತಪ್ಪಿಸಿಕೊಳ್ಳುವುದರಲ್ಲಿ ಬಲು ಜಾಣೆ. ಅವಳ ರಾಗ ಉದ್ದಕ್ಕೂ ನನ್ನನ್ನು ಕೆರಳಿಸುತ್ತಲೇ ಇತ್ತು. ಬೇಡ, ಬೇಡ, ದೂರ ಹೋಗು, ಎಂದು ಹೆದರಿಸಿದೆ. ಏಳೆಂಟುಬಾರಿ ಗಾಳಿಯನ್ನು ಗುದ್ದಿ "ನನ್ನ ಮುಷ್ಟಿ ಬಲವನ್ನು ನೀನರಿಯೆ, ನೋಡಿಕೊ, ಎಚ್ಚರಿಕೆ ತಕೊ, ಪ್ರಾಣ ಉಳಿಸಿಕೊ, ಇವತ್ತು ನಿನ್ನನ್ನು ತೀರಿಸಿ ಬಿಟ್ಟೇನು," ಎಂದು ಕೂಗಿದೆ.

ಊಹುಂ. ಆಕೆಯ ತಲೆಯೊಳಗೆ ಮೆದುಳಿದ್ದಂತೆ ತೋರಲಿಲ್ಲ. ದುಷ್ಟ ಸಂಹಾರ ಮಾಡುವಾಗ, ಶ್ರೀರಾಮಕೂಡ ತಾಟಕಿ ಸ್ತ್ರೀ ಯೆಂದು ಉಪೇಕ್ಷೆಮಾಡಲಿಲ್ಲ ಇನ್ನು ನಾನೇಕೆ ಹಿಂಜರಿಯಲಿ, ಎಂದು ಸಂಕಲ್ಪಿಸಿದೆ.

ನೂರು ಪೆಟ್ಟುಗಳಿಂದ ಇವಳು ತಪ್ಪಿಸಿಕೊಂಡರೂ, ನೂರೊಂದನೆಯ ಪೆಟ್ಟಲ್ಲಾದರೂ ಬೀಳಿಸುತ್ತೇನೆ, ಹೀಗೆ ನನ್ನ ರಕ್ತವನ್ನು ಹೀರಿ, ನನ್ನನ್ನು ಶೋಷಿಸಿ, ನನ್ನ ನೆಮ್ಮದಿಯನ್ನು ಕೆಡಿಸುವ ಈ ಸೊಳ್ಳೆೀನ....ಎಂದುಕೊಂಡೆ.

ಕೊನೆಗೂ ಖೂನಿ ನಡೆದೇನಡೆಯಿತು. ಮನೆಯಲ್ಲಿ ನೆಲದಮೇಲೆ ಅದರ ಕಳೇಬರ ಬಿದ್ದಿದೆ, ನನ್ನ ರಕ್ತದಲ್ಲಿ ತೊಯ್ದು.

—ನಾ. ಕ

—o—



ಏನ್ರೀ ಸೋಜಿಗ ಇದು! ನಿಲ್ಲಿಸಿದ ಬೊಂಬುಗಳು ಚಿಗುರಿದರೂ, ಮಂಟಪ ಇನ್ನು ಮುಗಿದಿಲ್ಲ.

ಕರತಾಡನದ ಸದ್ದು ಅಡಗುವುದರಲ್ಲಿಯೇ

" ಪಾನನಿರೋಧ ಒಳ್ಳೆಯದೆಂಬುದು ಕಾಂಗ್ರೆಸ್ ಸಂಸ್ಥೆಯ ಅಭಿಪ್ರಾಯ. ಅದನ್ನೇ ಮುಂದುವರೆಸಲಾಗುವುದು" ಎಂದು ಮುಖ್ಯ ಮಂತ್ರಿಗಳು ಹೇಳಿದ್ದನ್ನು ಸ್ವಾಗತಿಸಿದ ಕರತಾಡನಗಳ ಸದ್ದು ಅಡಗುವುದರಲ್ಲಿಯೇ ಅವರು, " ಆದರೆ, ಬದಲಾವಣೆ ಬೇಡವೆಂಬ ಹಟ ನಮಗಿಲ್ಲ. ಇದು ಪ್ರಜಾಯುಗ, ಪ್ರಜೆಗಳು ಬಹುಮತದಿಂದ ಬೇಡವೆಂದರೆ ಅದು ಹೋಗೇ ಹೋಗುವುದು" ಎಂದರು. (ಪತ್ರಿಕೆ)

" ಹೋಗೇ ಹೋಗುವುದು " ಎಂದು ಮುಖ್ಯ ಮಂತ್ರಿಗಳು ಹೇಳಿದ್ದನ್ನು ಸ್ವಾಗತಿಸಿದ ಕರತಾಡನಗಳ ಸದ್ದು ಅಡಗುವುದರಲ್ಲಿಯೇ ಅವರು " ಆದರೆ, ಪ್ರಜೆಗಳು ಬೇಡವೆನ್ನುವುದಕ್ಕೂ ಒಂದು ಕ್ರಮ ಇದೆ; ಪಾನನಿರೋಧದ ಆಗು ಹೋಗುಗಳ ವಿವರವನ್ನು ಅವರು ಚೆನ್ನಾಗಿ ಅರಿತು ಅದನ್ನು ತೆಗೆದು ಹಾಕುವುದರಿಂದ ಆಗಬಹುದಾದ ಅನಾಹುತಗಳ ಅರಿವು ಅವರಿಗಾಗಿರಬೇಕು; ಇದು ಸುಲಭ ಸಾಧ್ಯವಾದದ್ದಲ್ಲ" ಎಂದರಂತೆ. ಹಾಗೆ ಹೇಳಿದ್ದನ್ನು ಸ್ವಾಗತಿಸಿದ ಕರತಾಡನಗಳ ಸದ್ದು ಅಡಗುವುದರಲ್ಲಿಯೇ, ಅವರು, "ಆದರೆ, ಪ್ರತಿಯೊಬ್ಬ ಪ್ರಜೆಯೂ ಸುಶಿಕ್ಷಿತನಾಗಿ ವಿದ್ಯಾವಂತನಾಗಿ ಪ್ರವರ್ಧಮಾನಕ್ಕೆ ಬಂದನಂತರವೇ ನಾವು ಆಡಳಿತದಲ್ಲಿ ಮಾರ್ಪಾಟುಗಳನ್ನು ಮಾಡುತ್ತೇವೆ, ಎಂದಲ್ಲ. ಹಾಗೆ ಮಾಡುವುದಾದರೆ, ಕಲ್ಪಾಂತದವರೆಗೂ ಕಾಯಬೇಕಾಗುತ್ತದೋ ಏನೋ ..ಹಾಗೆ ಕಾಯುವುದು ದಡ್ಡತನವೆನಿಸಿತು" ಎಂದರಂತೆ. ಇದನ್ನು ಸ್ವಾಗತಿಸಿದ ಕರತಾಡನಗಳ ಸದ್ದು ಅಡಗುವುದರಲ್ಲಿಯೇ ಅವರು, "ಆದರೆ, ಪಾನನಿರೋಧವನ್ನು ತೆಗೆದು ಹಾಕುವುದು ಸಣ್ಣಪುಟ್ಟ ಮಾರ್ಪಾಟಲ್ಲವೆಂಬುದನ್ನು ನಾವು ಗಮನದಲ್ಲಿಡಬೇಕು. ಹಾಲಿ ಜಾರಿಯಲ್ಲಿರುವ ಅತ್ಯುತ್ತಮ ಪದ್ಧತಿಯೊಂದನ್ನು ಯಾರೋ ಹಲವು ಅಶಿಕ್ಷಿತರು . ಇತರೇ ವಿಷಯಗಳಲ್ಲಿ ಅವರು ಎಷ್ಟೇ ಸುಶಿಕ್ಷಿತರಿದ್ದಾಗ್ಯೂ—ಕೂಗಿದ ಮಾತ್ರಕ್ಕೆ, ಅವರು ಬಹುಮತವನ್ನು ಪಡೆದಿದ್ದರೂ, ಇದು ಪ್ರಜಾಯುಗವಾದರೂ, ನಾವು ಏಕಾಏಕಿ ಕಣ್ಣುಮುಚ್ಚಿಕೊಂಡು ರದ್ದುಗೊಳಿಸುವಂತಿಲ್ಲ" ಎಂದರಂತೆ. ಈ ಮಾತನ್ನು ಸ್ವಾಗತಿಸಿದ ಕರತಾಡನಗಳ ಸದ್ದು ಅಡಗುವುದರಲ್ಲಿಯೇ, ಅವರು, " ಆದರೆ, ರೈತರ ಕೂಲಿಗಾರರ ಪಟ್ಟಣಿಗರ ಹಳ್ಳಿಗರ ಸಾಮಾನ್ಯರ ನಿಮ್ಮಗಳ ಮತದ ಬೆಂಬಲದಿಂದ ಅಧಿಕಾರಕ್ಕೆ ಬಂದಿರುವ ನಾವು ನೀವು, ಎಂಥವರೇ ಇರಲಿ, ಏನೇಹೇಳಲಿ, ಬಹುಮತದಿಂದ ಹೇಳಿದರೆ, ನಡೆಸಿಕೊಡಲು ಕಂಕಣಬದ್ಧರು" ಎಂದರಂತೆ. ಇದನ್ನು ಸ್ವಾಗತಿಸಿದ ಕರತಾಡನದ ಸದ್ದು ಅಡಗುವುದರಲ್ಲಿಯೇ, ಅವರು, " ಆದರೆ........" (ಸಶೇಷ)

—ಕಾಮತ್.

ಕಿಟ್ಟಿಯ ಮದುವೆ

ಮೂವತ್ತೈದು ವರ್ಷ ವಯಸ್ಸಾಗಿದ್ದರೂ ಮದುವೆಯ ಮಾತೆತ್ತಿದರೆ ಕಿವಿ ಮುಚ್ಚಿಕೊಳ್ಳುತ್ತಿದ್ದ ನಮ್ಮ 'ಕಿಟ್ಟಿ'. ಬೀದಿಯಲ್ಲಿ ನಡೆಯುವಾಗ ಎದುರಿಗೆ ಹುಡುಗಿಯರು ಸಿಕ್ಕಿದರೆ ಹೌಹಾರಿ ಜೋರಾಗಿ ಹೆಜ್ಜೆಹಾಕಿ ಅವರ ದೃಷ್ಟಿಯಿಂದ ಪಾರಾಗುತ್ತಿದ್ದ. ಸ್ನೇಹಿತರು ಕೆಣಕಿ ಮಾತು ತೆಗೆದರೆ ಮಾತುಮರೆಸಿ ಇನ್ನಾವುದೊ ವಿಚಾರ ಎತ್ತುತ್ತಿದ್ದ. ಮದುವೆಯಾಗಿ ಅದರ ಸಾರ (!) ವನ್ನು ತಿಳಿದಂಥ ನಮ್ಮವರು ಆಗಾಗ್ಯೆ ನಯವಿನಯ, ಒಂದೊಂದು ಸಾರಿ ದಬಾವಣೆಯಿಂದ ಹೇಳಿದ ಮಾತೆಲ್ಲ ತಿರಸ್ಕರಿಸಿದ್ದ. ಇಷ್ಟು ನಾವು ಅವನೊಡನಾಡಿದ್ದರೂ ಅವನ ಅಂತರಂಗ ತಿಳಿದಿರಲಿಲ್ಲ. ಹೆಣ್ಣಿಗೆ ಹೆದರಿದ್ದನೋ, ಅಥವಾ ಸಂಸಾರಕ್ಕೆ ಹೆದರಿದ್ದನೋ ಅಥವಾ ಏನೂ ತಿಳಿಯದೆ ಅನಿಶ್ಚಿತ ಭಾವನೆಯಿಂದ ಇರುತ್ತಿದ್ದನೊ ಎಂಬುದೇ ಪತ್ತೆಯಾಗಿರಲಿಲ್ಲ.

"ಅವನು ಬ್ರಹ್ಮಚಾರಿಯಾಗಿದ್ದರೆ ನಿಮಗೇನು ನಷ್ಟವಾಗಿತ್ತು?" ಎಂದು ನೀವು ಕೇಳಬಹುದು. ಅದನ್ನೇ ಹೇಳುತ್ತೇನೆ. ಮನೆಯಲ್ಲಿ ಅವನನ್ನು ಹಿಡಿದು ಹಾಕುವ ಪ್ರಾಣಿ ಇಲ್ಲದ್ದರಿಂದ ಸದಾ "ಊರಿನ ದನ ಕಾಯುವ" ಕೆಲಸವನ್ನೂ ಮಾಡುತ್ತ ಇದ್ದ. ಯಾವ ಸಂಘ ನೋಡಲಿ, ಯಾವ ಸೊಸೈಟಿ ನೋಡಲಿ ಇವನೇ ಕಾರ್ಯದರ್ಶಿ, ಇವನೇ ಅಧ್ಯಕ್ಷ ಇವನೇ ಸೂತ್ರಧಾರ. ಇವೆಲ್ಲಾ ಸಾಲದಿದ್ದರೆ "ರೇಷನ್ ಕಾರ್ಡುದಾರರ ಸಂಘ" ಎಂತಲೋ "ಒಟ್ಟಿ ಉಡುವವರ ಸಂಘ" ಎಂತಲೋ ಹೊಸದಾಗಿ ಸ್ಥಾಪಿಸಿ ಅದನ್ನು ನಡೆಸುತ್ತಾನೆ. ಹೋದ ವರ್ಷ ಗೆಳೆಯರು ಹೆಚ್ಚಿ ರೇಷನ್ ಖೋತಾಬಿದ್ದಾಗ ಮತ್ತು ತನಗೆ ಬಟ್ಟೆ ದೊರೆಯುವುದು ಸ್ವಲ್ಪ ಕಷ್ಟವಾಗಿದ್ದಾಗ ಮೇಲಿನ ಎರಡು ಸಂಸ್ಥೆಕಟ್ಟಿ ಆ ಮೂಲಕ ಅನುಕೂಲ ಪಡೆದಿದ್ದ. ಇದೆಲ್ಲದರಿಂದ ನಮಗೇನು ನಷ್ಟವಿರಲಿಲ್ಲ. ಆದರೆ ಈ ವರುಷ ಮುನಿಸಿಪಾಲಿಟಿ ಚುನಾವಣೆಗೆ ಅವನು ಕೈ ಹಾಕಿದಾಗ ನಿಜವಾಗೂ ನಮಗೆ ಕುತ್ತಿಗೆಗೇ ಬಂತು.

ಇದುವರೆಗೂ ನಾವು ಹೇಗೋಹಾಗೆ ಪೌರಸಭೆಗಳಲ್ಲಿ ಶಾಶ್ವತವಾಗಿ ಇದ್ದು ಕೊಂಡು ಬಂದಿದ್ದೆವು. ಯಾರೂ ನಮ್ಮಮುಂದೆ ನಿಲ್ಲುವವರಿಲ್ಲ. ಎಲ್ಲೋ ಒಂದೊಂದು ಬಾರಿ ಕೆಲವರು ವ್ಯಾಪಾರಸ್ಥರು ತಮ್ಮ ಮನೆ ಲೈಸೆನ್ಸ್ ಇಲ್ಲದೆ ಕಟ್ಟಿದ್ದನ್ನು ಉಳಿಸುವುದಕ್ಕಾಗಿಯೋ, ಅಥವಾ ಹೊಸದಾಗಿ ಲೈಸೆನ್ಸ್ ಪಡೆಯಲೋಸುಗವೋ ಚುನಾವಣೆಗೆ ನಿಂತು ಜಯಶೀಲರಾಗಿ ತಮ್ಮ ಕೆಲಸ ಮಾಡಿಕೊಂಡದ್ದು ಉಂಟು. ಅದೂ ಅವ

ಶ್ಯಕವಿರಲಿಲ್ಲ ಎನ್ನಿ. ಏಕೆಂದರೆ ಕಳೆದ ವರ್ಷ ನಮ್ಮ ಪೌರಸಭೆ ಕಟ್ಟಡದ ಪಕ್ಕದಲ್ಲಿರುವ ಸಿನಿಮಾ ಮಾಲೀಕರು ರಸ್ತೆಯಲ್ಲಿ ಎರಡು ಅಡಿ ಅಗಲ ಜಾಗ ವತ್ತುವರಿ ಮಾಡಿಸಿಕೊಳ್ಳುವ ಸಲುವಾಗಿ ಮುನಿಸಿಪಾಲಿಟಿಗೆ ಉಮೇದುವಾರನಾಗಿ ನಿಂತ. ನಾನು ಅವನಿಗೆ ಭರವಸೆ ಕೊಟ್ಟು ನಾನೇ ಮಾಡಿಸಿಕೊಟ್ಟಿದ್ದೂ, ಅವಕ್ಕಾಗಿ ನಮ್ಮ ಪೌರ ಸಭೆಯಮುಂದೆ ಎರಡು ಅಡಿ ಅಗಲ ಜಾಗಬೇಕೆಂದು ಸುಳ್ಳುಹೇಳಿ ಅದನ್ನ ಮಾಡಿಸಿದ್ದೂ ಆಯಿತಷ್ಟೆ. ಹಾಗೆಲ್ಲಾ ನಾವು ಆರಾಮವಾಗಿ ಪೌರ ಕೆಲಸ ಮಾಡುತ್ತಿರುವಾಗ ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ ಈ ಪ್ರಾಣಿ ಮುನಿಸಿಪಾಲಿಟಿಗೆ ಕೈ ಹಾಕಬೇಕೆ? ನಮ್ಮ ಸರ್ವಾಧಿಕಾರಕ್ಕೆ ಇನ್ನೂ ಬಲಿಬಿತ್ತು ಎಂದು ನಮಗೆ ಹೆದರಿಕೆ ಆದದ್ದರಲ್ಲಿ ಆಶ್ಚರ್ಯವೇನಿಲ್ಲ!

ಇದಕ್ಕೆ ಏನು ಮದ್ದು ಎಂದು ನಾನು, ಕಾಣಿ, ಪಾಪಣ್ಣ, ರಾಮಸ್ವಾಮಿ ಎಲ್ಲಾ ಕುಳಿತು ಯೋಚಿಸಿದೆವು. ನೇರವಾಗಿ ಹೇಳಿದರೆ ನಡೆಯದು. ಕೊನೆಗೆ ಏನಾದರೂ ಮಾಡಿ ಈ ಪ್ರಾಣಿಯ ಕುತ್ತಿಗೆಗೆ ಒಂದು ಹೆಣ್ಣನ್ನ ಕಟ್ಟಿದರೆ ಎಲ್ಲಾ ಸರಿ ಹೋಗುವುದು ಎಂಬ ತೀರ್ಮಾನಕ್ಕೆ ಬಂದೆವು. ಅದಕ್ಕೆ ತಕ್ಕ ಉಪಾಯವನ್ನ ಮಾಡಿದೆವು.

ಪುರಸಭೆ ಚುನಾವಣೆ ಪ್ರಾರಂಭವಾಗುತ್ತಿದ್ದಂತೆಯೇ ಕಿಟ್ಟಿಯೂ ಬಣ್ಣ ಬದಲಾಯಿಸಿದ. ಹೆಂಗಸರ ಮುಖ ಕಂಡರೆ ವೈಲಿದೂರ ಓಡಿಹೋಗುತ್ತಿದ್ದವನು ಬೆಳಗಾಗುತ್ತಲೇ ಓಟರುಗಳ ಬಾಗಿಲಲ್ಲಿ ನಿಂತು "ರಂಗಮ್ಮನವರೇ"—'ಸುಶೀಲಮ್ಮನವರೆ' "ತಿಮ್ಮಮ್ಮನವರೆ" ಎಂದು ಕೂಗಲು ಪ್ರಾರಂಭಿಸಿದ. ಇವನ ಈಗತಿಯನ್ನ ಕಂಡು ನಮಗೆ ತುಂಬಾ ಹಿಗ್ಗು. ನಮ್ಮ ಗುಂಪಿನ ಪೈಕಿ ನಾನು ನಮ್ಮ 'ಪ್ಲಾನ್' ಅನ್ನ ಕಾರ್ಯಗತಮಾಡಲು ನೇಮಿತನಾದೆ. ಕಿಟ್ಟಿಯ ಸ್ನೇಹಿತನೂ ಆದ್ದರಿಂದ ಅವನ ಹಿಂದೆ-ಮುಂದೆ ಸುತ್ತಲು ಪ್ರಾರಂಭಿಸಿದೆ. ನೀನು ಹೀಗೆ ಮಾಡಬೇಕು, ಹಾಗೆ ಮಾಡಬೇಕು. ಎಂದು ಸಲಹೆ ಇತ್ತೆ, "ಅಯ್ಯಾ, ಈಗ ಹೆಂಗಸರಿಗೂ ಓಟು ಬಂದಿದೆ. ಅವರ ಕಾಲಿಗೆ ನೀಬೀಳದಿದ್ದರೆ ನೀನು ಮುಳುಗಿ ಹೋಗುತ್ತೀಯ. ನಿನ್ನ ವಿರೋಧಿ ಪುಟ್ಟಯ್ಯ ನಿನಗೆ ನೀರು ಕುಡಿಸುತ್ತಾನೆ." ಎಂದು ಹೇಳಿ ರೇಗಿಸಿದೆ. "ಏನಾದರೂ ಆಗಿಹೋಗಲಿ. ಪುಟ್ಟಯ್ಯನನ್ನು ಸೋಲಿಸಬೇಕು. ಇಲ್ಲದಿದ್ದರೆ ನನ್ನ ಮಾನ ಉಳಿದೀತೇ" ಎಂದು ರೇಗಿದ ಕಿಟ್ಟಿ. ಇದೇ ಅವಕಾಶ ಉಪಯೋಗಿಸಿಕೊಂಡೆ ನಾನು.

ನನ್ನ ಪ್ಲಾನ್ ಪ್ರಕಾರ ಈ ಬ್ಲಾಕ್‌ನ ಹೆಂಗಸರ ಸಭೆಯೊಂದನ್ನ ಕರೆಸಿದೆ. ಮಾರುತಿ ದೇವಸ್ಥಾನದಲ್ಲಿ ನನ್ನ ಪತ್ನಿಯ ಮುಂದಾಳುತ್ವದಲ್ಲಿಯೆ ಸಭೆ ಸೇರಿತು. ಆದರೆ ಕಿಟ್ಟಿ ಎಣಿಸಿದ್ದಂತೆ ಅಮ್ಮಂದಿರಾಗಲೀ, ಮುಪ್ಪಿನ ಮುತ್ತೈದೆಯರಾಗಲೀ, ಸಭೆಗೆ ಹಾಜರಿರಲಿಲ್ಲ. ಎಲ್ಲಾ ಹುಡುಗುಪಾಳ್ಯವಾಗಿತ್ತು. ಇದನ್ನ ದೂರದಿಂದ ನೋಡಿದ ಕಿಟ್ಟಿ. ಕೌರವನ ಸೈನ್ಯವನ್ನು ನೋಡಿದ ಉತ್ತರ ಕುಮಾರನಂತೆ ಹಿಂದಕ್ಕೆ ಪಲಾಯನಮಾಡಲು ತೊಡಗಿದ್ದ. ಆಗ ಅವನಿಗೆ ಪುಟ್ಟಯ್ಯನನ್ನ ಜ್ಞಾಪಕಕ್ಕೆ

ತಂದು, ಮಾತಿನಲ್ಲಿ ಪುಟ್ಟಯ್ಯನನ್ನ ಸೀಳಿಹಾಕಿ ಪುನಃ ದೇವಸ್ಥಾನದ ಹತ್ತಿರಕ್ಕೆ ಕರೆದುಕೊಂಡು ಹೋಗುವಹೊತ್ತಿಗೆ ಸಾಕುಸಾಕಾಗಿ ಹೋಯ್ತು.

ನಾನು, ಕಿಟ್ಟಿ ವಿನಃ ಬೇರೆ ಒಂದು ಗಂಡುಪಿಳ್ಳೆಯಿರಲಿಲ್ಲ. ಕಿಟ್ಟಿಗೆ ಒಂದು ಕುರ್ಚಿ ಹಾಕಿ ಕೂರಿಸಿ ನಾನು ನೆಲದಮೇಲೆ ಕುಳಿತೆ. ನನ್ನ ಪತ್ನಿ ಪ್ರಾಸ್ತವಿಕ ಭಾಷಣಮಾಡಿದಳು. "ಇವರು ನಮ್ಮ ಯಜಮಾನರ ಸ್ನೇಹಿತರು. ಉತ್ಸಾಹಿಗಳು ಎಷ್ಟೋ ಸೇವೆ ಕಾರ್ಯಮಾಡಿದ್ದಾರೆ. ಮದುವೆ ಆಗದಿದ್ದರೂ (ನನ್ನ ಕಡೆ ನೋಡುತ್ತ) ಈಗ ನಗರ ಪಿತೃವಾಗಬೇಕೆಂದು ಹೊರಟಿದ್ದಾರೆ .." ಇಷ್ಟು ಹೇಳುತ್ತಿರುವಾಗಲೇ ಅಲ್ಲಲ್ಲಿ ಗುಜುಗುಜು ಪ್ರಾರಂಭವಾಯ್ತು. "ಏನೇ ಮಂಜುಳ ಅದು. ನಿಜವಾದ ಪಿತೃ ಆಗದವರು ನಗರ ಪಿತೃ ಹೇಗೆ ಆಗುತ್ತಾರೆಯೆ" ಎಂದು ಮೂಲೆಯಿಂದ ಧ್ವನಿ ಹೊರಟಿತು. ಕಿಟ್ಟಿ ಮೋರೆ ಕಪ್ಪಿಟ್ಟಿತ್ತು. ಏನೋ ಮಸಲತ್ತು ನಡೆದಿದೆ ಎಂದು ಅವನು ನನ್ನ ಕಡೆ ದುರದುರನೆ ನೋಡಿದ. ನಾನು ಏನೂ ತಿಳಿಯದವನಂತೆ ತಲೆ ತಗ್ಗಿಸಿ ಕೊಳ್ಳುತ್ತಿದ್ದೆ. ಅಷ್ಟರಲ್ಲಿ ನಾಲ್ಕೈದು ಜನ ಹುಡುಗಿಯರು ದಡದಡನೆ ಎದ್ದು ಬಂದು "ಏನ್ರೀ, ಇವರಿಗೆ ಓಟು ಹಾಕು ಎಂತ ಕೇಳೋಕೆ ಬಂದಿದೀರ. ನಾಚಿಕೆ ಆಗುಲ್ವೆ? ನಮ್ಮ ಕುಲಕ್ಕೆ ಅವಮಾನ ಮಾಡಿದ್ದಾರೆ ಇವರು—ಹಾಗೆ—ಹೀಗೆ" ಎಂತ ಕೂಗಾಡಿದರು. ನಾನು ಏನೇನೋ ಹೇಳಿ ಸಮಾಧಾನಮಾಡಲು ಯತ್ನಿಸಿದೆ. ಕಡೆಗೆ "ಸ್ವಲ್ಪತಾಳಿ. ನಿಮ್ಮೆಲ್ಲರ ಮುಂದೆ ಈಗ ಪ್ರತಿಜ್ಞೆಮಾಡುತ್ತಾರೆ. ನೀವೆಲ್ಲ ಕೊಡಿಸಿದ ಹೆಣ್ಣನ್ನು ಮದುವೆ ಆಗುತ್ತೇನೆ" ಎಂದು ಆದರೆ ಒಂದು ಷರ್ತಿನಮೇಲೆ. ನೀವು ಓಟು ಗಳಿಸಿಕೊಟ್ಟು ಕಿಟ್ಟಿಯನ್ನು ಚುನಾಯಿಸಬೇಕು" ಎಂದು ತೀರ್ಮಾನ ಕೊಟ್ಟೆ. ಸಭೆಯಲ್ಲಿ ಚಪ್ಪಾಳೆಯ ಸುರಿಮಳೆಯಾಯ್ತು. ಕಿಟ್ಟಿ ರೇಗಿ ನನಗೆ ಹೊಡಿಯೋದಕ್ಕೆ ಬಂದ. ನನ್ನ ಹೆಂಡತಿ ಮಧ್ಯದಲ್ಲಿದ್ದುದರಿಂದ ನಾನು ಬದುಕಿದೆ. ಇಲ್ಲಿಂದ ಪಾರಾಗಲು ಬಾಗಿಲುಕಡೆಗೆ ಹೊರಡಲನುವಾದ. ಬಾಗಿಲಲ್ಲಿ ನಾಲ್ಕು ಜನ ಕನ್ನೆಯರು ಗುಂಪು ಕಟ್ಟಿಕೊಂಡು ನಿಂತುಬಿಟ್ಟಿದ್ದಾರೆ. ಹೀಗಾಗಿ ದಿಕ್ಕುಗೆಟ್ಟು ನಿಂತುಬಿಟ್ಟ ನಮ್ಮ ಕಿಟ್ಟಿ.

ಇದೆಲ್ಲಾ ನೋಡುತ್ತಿದ್ದ ನನ್ನ ಪತ್ನಿ ಕಿಟ್ಟಿಯ ಪರ ವಕಾಲತ್ತುವಹಿಸಿ ಎಲ್ಲರನ್ನೂ ಮನೆಗೆ ಕಳಿಸಿದಳು. ನಮ್ಮ ಮನೆಗೆ ಊಟಕ್ಕೆ ಬಾ ಎಂದು ಹೇಳಿ ಮನೆಗೆ ಎಲ್ಲರನ್ನೂ ಕರೆತಂದಳು.

ಆದಿನ ಊಟದ ಸಮಯದಲ್ಲಿ ಹೊಸ ಹುಡುಗಿಯೊಂದು ಬಂದು ಕಿಟ್ಟಿಯ ಎದುರು ಪಂಙ್ತಿಯಲ್ಲಿ ಊಟಕ್ಕೆ ಕುಳಿತಿತ್ತು. ಕಿಟ್ಟಿ ಚುನಾವಣೆಯನ್ನೆಲ್ಲಾ ಮರೆತು ಕೇಕೆ ಹಾಕುತ್ತಾ ಊಟ ಹೊಡೆಯುತ್ತಿದ್ದ.

ಅಂತೂ ಕೊನೆಗೂ ಗಂಟುಹಾಕಿದ್ದಾಯ್ತು. ಕಿಟ್ಟಿ ಚುನಾವಣೆಯಾಗಿಯೂ ಬಂದ. ಆದರೆ ನಮ್ಮ ಕೆಲಸದಲ್ಲಿ ಕೈ ಹಾಕಲು ಈಗ ಅವನಿಗೆ ಬಿಡುವಿಲ್ಲ.

'ಹಾರ್ನಳ್ಳಿ'

ಅಯ್ಯೋ!

—

ಉದಯವಾಯಿತು, ಬೆಳಕು ಹರಿಯಿತು,
ನೆಲದಿ, ನೀರಲಿ, ವನದಲಿ.
ಮುದದಿ ಹಕ್ಕಿಗಳೆಲ್ಲ ಹಾರಿತು,
ಉಣಿಸನರಸುವ ಸೆಣಸಲಿ.
ಸವಿಯ ನಾದವು ಕವಿದು ಬರುತಿದೆ
ಕುಣಿವ ನಾಡಿಗಳೊತ್ತಿಗೆ;
ರವಿಯ ಕಾವದು ಕವಿಯ ಕೆಣಕಿದೆ
ಮಣಿವ ಗಾನದ ಕತ್ತಿಗೆ.
—ಆದರಯ್ಯೋ!
ಹೊಟ್ಟೆ ಹಸಿದಿದೆ.

ಜಾಜಿ ಮಲ್ಲಿಗೆ ಮೊಲ್ಲೆ ಸಂಪಿಗೆ
ಬಾಜಿ ಕಟ್ಟಿವೆ, ಮೋಹಿಸಿ.
ಭಾವ ಗೀತಾ ಮಧುರ ವಾಹಿನಿ
ನುಡಿಯೆ ಸಾಸಿರ ತನ್ನನ,
ಹಸರು ಹಾಸಿಗೆ, ನೀಲಿ ಹೊದ್ದಿಕೆ,
ಬಳಿಗೆ, ಕನಸಿನ ಸುಂದರಿ
ನೋವ ನರಿಯದ ಹರುಷವೆದೆಯಲಿ
ಕಿವಿಗೆ ದುಂಬಿಗಳಿಂಚರ
—ಆದರಯ್ಯೋ!
ಹೊಟ್ಟೆ ಹಸಿದಿದೆ.

ಹಗಲುನಾಟಕ ಕಡೆಯ ದೃಶ್ಯ, ಆ
ಸೂರ್ಯದೇವನ ಅಸ್ತಮ
ಗೂಡ ಸೇರಲು ಕೂಡಿ ಬರುತಿವೆ
ಅದನು ಮೆಚ್ಚಿದ ಖಗಗಣ


ದುಡಿದು ಬಳಲಿದ ಪಾಪದೊಂದಿಗೆ
ದುಡಿದೆ ತಿಂಬುವ ಸಂತಸ!
ಸಂಜೆ ದಾರಿಯಗೆಳೆಯ ಗೆಳತಿಯ
ಹರಟೆ, ಹಾಸ್ಯ, ವಸಂತವು!

—ಆದರಯ್ಯೋ!
ಹೊಟ್ಟೆ ಹಸಿದಿದೆ.

ದಣಿದ ಲೋಕಕೆ ತಣಿವ ನೀಡುವ
ಮಂದ ಹಾಸದ ಚಂದ್ರನು,
ಬಿಳಿಯ ಮೋಡದ ಪರದೆ ಹಿಂದೆಯೆ
ಕಣ್ಣು ಮಿಟುಕಿಪ ತಾರೆಯು,
ಮತ್ತ ಮನವನು ಮತ್ತೆ ಕೆರಳಿಸೆ
ಎತ್ತಲೂ ಬೆಳದಿಂಗಳು
ಒಂದೆ ಮನೆಯಲಿ ದೀಪ ಇನ್ನೂ
ಅಲ್ಲಿ ಕಿಲ ಕಿಲ, ಹೆಂಗಳು!

—ಆದರಯ್ಯೋ!
ಹೊಟ್ಟೆ ಹಸಿದಿದೆ.

—ನಾ. ಕ.



"ಎಲ್ರೀ, ಐದು ರೂಪಾಯಿ ಬಹುಮಾನ?"

ಇನ್ನೂ ವಯಸ್ಸು ತುಂಬಿಲ್ಲ

ನಮ್ಮ ಕರ್ನಾಟಕ ಸಂಘಕ್ಕೆ ಸ್ವಯಂಸೇವಕರು ಬೇಕು. ಅವರಿಲ್ಲದೆ ಯಾವುದೊಂದು ಕೆಲಸವೂ ಅಸಾಧ್ಯ! ಯಾರು ಸಿಕ್ಕುತ್ತಾರೆ ನಮಗೆ ಅಂತ ಕಾರ್ಯಕಾರಿ ಮಂಡಲ ಯೋಚಿಸುತ್ತಿದ್ದಾಗ ಒಬ್ಬಾತ ಅಂದನಂತೆ "ಅದಕ್ಕೇನು ಯೋಚನೆ! ನಮ್ಮ ಸರ್ಕಾರ ಹುಕುಂ ಹೊರಡಿಸಿದೆ. ೧೫ ಆಗೋತನಕ ಹುಡುಗರನ್ನು ಕಾಲೇಜಿಗೆ ಸೇರಿಸಬಾರದು ಅಂತ. ಅಂದಮೇಲೆ ಸಾಕಷ್ಟು ಚೂಟಿ ಹುಡುಗರು ಕೆಲಸ ಇಲ್ಲದೆ ಇರ್ತಾರೆ. ಅವರೆಲ್ಲಾ ನಮಗೆ ಸಿಕ್ಕೇಸಿಗುತ್ತಾರೆ"

ಒಂದು ವರ್ಷ ರಜಾ ಸಿಕ್ಕಿದ ನಮ್ಮ ಕೇರೀಲಿರುವ ಅಂತಹ ಹುಡುಗರ ಪಟ್ಟಿ ತಯಾರಿಸಬೇಕು ಎಂದು ನಿರ್ಣಯ ಮಾಡಿಕೊಂಡರಂತೆ.

* * *

ಕಿಟ್ಟು ತಂದೆಗೆ ಹೇಳಿದನಂತೆ "ಅಪ್ಪಾ ಅಪ್ಪಾ ನಮಗೆ ಒಂದು ವರ್ಷ ರಜಾ ಸಿಕ್ಕಿದೆ." ಅಂತ. ಅಪ್ಪನಿಗೆ ಆಗಲೇ ಭಯ, ಹುಡುಗ ಎಲ್ಲಿ ನಪಾಸಾದನೊ ಅಂತ. ತಕ್ಷಣವೇ ಯಾರು ಯಾರನ್ನ ಕಾಣುವುದು, ಎಂಥ ಶಿಫಾರ್ಸು ಬರೆಸುವುದು, ಹೆಡ್ಮೇಷ್ಟರ ಹೆಸರೇನು, ಎಂದೆಲ್ಲ ಮಿಂಚಿನಂತೆ ಯೋಚಿಸಿದ. ಅಪ್ಪನ ಮುಖನೋಡಿದಾಗಲೇ ಮಗನಿಗೆ ವಿಷಯ ಗೋಚರವಾಯಿತು. "ಫೇಲಾದ್ದರಿಂದ ಬಂದ ರಜ ಅಲ್ಲ" ಅಂದ. ಅಪ್ಪನಿಗೆ ಆಶ್ಚರ್ಯ! ಸ್ವತಂತ್ರ ಭಾರತದ ಪ್ರಥಮ ಆಯ್ಕೆಯ ಫಲವೋ ಏನೋ ಎಂದು ಒಂದು ಕ್ಷಣ ಹೊಳೆಯಿತು. ಇರಲಾರದು, ಎನಿಸಿತು. "ಏನಾದರೂ ತಪ್ಪು ಗಿಪ್ಪು ಮಾಡಿದೆಯೇನೋ, ಸ್ಕೂಲಲ್ಲಿ ಸ್ಟ್ರೈಕು, ಗೀಕು ಮೇಷ್ಟರುಗಳನ್ನ ಹೊಡೆದು ಗಿಡದು....?" ಎಂದು ಅಪ್ಪ ವಿಚಾರಿಸಿದ. "ತಪ್ಪೆಲ್ಲ ನಿನ್ನದೇನೆ!" ಅಂದ, ಮಗ. "ಎಲಾ, ಇವನೆ! ನನ್ನ ಮೇಲೆಯೇ ತಿರುಗಿ ಬೀಳುವ ಇವ ಮೇಷ್ಟರುಗಳನ್ನ ಸುಮ್ಮನಿರಗೊಡಿಸುತ್ತಾನೆಯೆ?" ಎಂದು ಅಪ್ಪ ರೇಗಿದ, ಒಳಗೊಳಗೆ. "ನಾನೇನು ಮಾಡಿದೆನೋ?" ಅಂದ, ತಂದೆ. ಈಗ ಮಾಡಿದ್ದಲ್ಲ, ಅಪ್ಪ! ಸುಮಾರು ವರ್ಷಗಳ ಹಿಂದೇನೆ ಮಾಡಿದ್ದು....ನನ್ನನ್ನ ಸ್ಕೂಲಿಗೆ ಸೇರಿಸಿದಾಗ, ನೀನು ನನ್ನ ವಯಸ್ಸನ್ನ ಸರಿಯಾಗಿ ಏಕೆ ಕೊಟ್ಟೆ? ನಾನು ಎಸ್.ಎಸ್.ಎಲ್.ಸಿ. ಪಾಸಾಗುವ ಹೊತ್ತಿಗೆ ಸರಿಯಾಗಿ ೧೫ ವರ್ಷ ತುಂಬಿ ತುಳುಕುತ್ತಿರುವ ಹಾಗೆ ಲೆಕ್ಕ ಸರಿಯಾಗಿ ಹಾಕಿ ಕೂಡ ಬಾರದಾಗಿತ್ತೆ? ಅದಕ್ಕೇ ನೋಡು, ನನ್ನಷ್ಟ ಒಂದು ವರ್ಷ ಎರಡು ತಿಂಗಳು

ಮನೆಯಲ್ಲೇ ಇದ್ದು ನಿನ್ನನ್ನ ಪೀಡಿಸಿ ಕಾಡಿಸುವ ಹಾಗೆ ಸರ್ಕಾರ ಹುಕುಂ ಕೊಟ್ಟಿದೆ," ಅಂದ, ಆತುರದಲ್ಲೇ ಹುಟ್ಟಿದ ಗೋತ್ರೋದ್ಧಾರಕ, ಕಿಟ್ಟು.

* * *

ರಾಜು ಇರೋದು ಹೈಸ್ಕೂಲ್ ಒಂದನೆಯ ತರಗತಿಯಲ್ಲಿ. ಚೋಟುದ್ದ ಹುಡುಗ, ಮೊಳದುದ್ದ ಪಂಚೆ, ಮಣಭಾರ ಪುಸ್ತಕದ ಗಂಟು ಕೊಂಕಳಲ್ಲಿ. ಇನ್ನೇನು ಪಾಠಗಳು ಏನೂ ನಡೆಯುದೆ ಇದ್ದರೂ, ಮಾರ್ಚಿ ತಿಂಗಳು ಅಂದರೆ, ಪರೀಕ್ಷೆ ಪರ ದಾಟ. ಮನೆಮನೆಯಲ್ಲೂ ಓದೋ, ಓದೋ, ಎಂಬ ಕಾಟ. ರಾಜು ಓದಲೇ ಇಲ್ಲ. "ನಿನಗೆ ಗೊತ್ತಿಲ್ಲ, ಅಪ್ಪ! ನಾನು ಓದಿ ಪಾಸಾದರೆ ಆಗೋ ಅನಾಹುತ. ಮುಂದೆ ಒಂದು ವರ್ಷ ನನಗೆ ಬೀದೀನೇ ಗತಿ" ಎಂದ ... ಅವನದೂ ಅದೇ ಗೋಳು ....ವಯಸ್ಸು ೧೨ ಮಾತ್ರ, ಇನ್ನೂ.

* * *

ಅಲಮೇಲಮ್ಮನವರು ಪಕ್ಕದ ಮನೆಗೆ ಬಂದು, ತನ್ನ ಮಗ ಕಾಲೇಜು ಸೇರಿದ ಅಂತ ಜಂಬ ಕೊಚ್ಚಿ ಕೊಂಡಾಗ, ಲಕ್ಷ್ಮೀದೇವಮ್ಮ ಅಳುವುದೊಂದು ಬಾಕಿ, ಏಕೆ, ಅತ್ತೇಬಿಟ್ಟರು. ಆಕೆ ಸಾಸುವೆಸಾಲ ಪಡೆದುಕೊಂಡು ಹೊರಬಾಗಿಲು ದಾಟಿದ ಕೂಡಲೇ...." ನನಗೂ ಅವಳಿಗೂ ಒಂದೇ ಮುಹೂರ್ತದಲ್ಲೇ ಲಗ್ನ ಆದದ್ದು.... ಅವಳಿಗೆ ದೇವಸ್ಥಾನದಲ್ಲಿ, ನನಗೆ ಛತ್ರದಲ್ಲಿ.. .ಅವಳಿಗೂ ಮೊದಲನೆಯದು ಗಂಡು, ನನಗೂ ಅಷ್ಟೆ....ಆದರೂ, ನೋಡ್ರಿ, ಅವಳ ಜಂಬ ...ನನ್ನ ಮುಂದೆ ಬಂದು ಹೊಡೆದು ಕೊಳ್ಳುತ್ತಾಳೆ, ಛೇರೀನ ...ನಮ್ಮ ಕೃಷ್ಣಮೂರ್ತಿ ಹುಟ್ಟಿದ್ದು ಅವಳ ರಾಮೂಗಿಂತ ಒಂದು ವರ್ಷ ನಂತರ, ಅನ್ನೋದೇ ಅವಳ ಜಂಬ.... ಪಾಪ! ಇವನಿಗೆ ಇನ್ನೂ ೧೫ ಆಗಿಲ್ಲ ಅಂತ, ಈಚೆಗೆ ದಬ್ಬಿದರು, ಅವಳ ಮಗನನ್ನ ಆಚೆಗೆಳೆದುಕೊಂಡರು....ಎಂದು ಅಳುತ್ತಾ, ತನ್ನ ಮಗಳ ಕಡೆ ನೋಡಿ, ಪುಣ್ಯಾತಿಗಿತ್ತಿ, ನೀನಾದರೂ ಅವಳ ಮಗಳಿ ಗಿಂತ ಮೊದಲೇ ಗಂಡು ಮಗು ಹೆತ್ತು ನನ್ನ ಹೊಟ್ಟೆ ಉರಿ ತಣ್ಣಗೆ ಮಾಡೆ, ಎಂದರು.

ಏನೋ! ಕಾಲೇಜಿಗೆ ಹೋಗೋಲ್ವೇನೋ, ಅಂತ ಮಾಲಿಂಗಯ್ಯನವರು ತನ್ನ ಗೆಳೆಯನ ಮಗನನ್ನು ಕೇಳಿದರು. ಅವನು, ಇಲ್ಲ, ಅಂದ. "ಯಾಕೆ? ಸೀಟ್ ಸಿಕ್ಕಲಿಲ್ಲವೆ?" "ಇಲ್ಲ" "ಯಾಕೆ? ಫೇಯಿಲಾಯಿತೆ?" ಮಾತಿಲ್ಲ. "ಓಹೊ! ಪಾಸಾಗಿದ್ದರೂ, ವಯಸ್ಸು ತುಂಬಲಿಲ್ಲ ಅಂತ ಕಾಣುತ್ತೆ" ಅಂದರು, ಮಾಲಿಂಗಯ್ಯ ನವರು. ಸದ್ಯಕ್ಕೆ, ಮಾನ ಉಳಿಯಿತು, ನಪಾಸಾಗಿದ್ದ ನಿಜಸ್ಥಿತೀನ ಮಾ ಲಿಂಗಯ್ಯನವರು ಪತ್ತೆ ಹಚ್ಚುವ ತನಕ ಬಜಾವಾದೆ, ಅಂತ ಹುಡುಗನೂ ಓಡಿ ತಪ್ಪಿಸಿಕೊಂಡ.

—ಎಸ್. ವೆಂ.

ಕಾಮದಹನ

ಹಬ್ಬದ ಹೋಳಿಗೆ ಹೊಡೆದು ಹಾಸಿಗೆಗೆ ಒರಗಿ ಕಾಲುಚಾಚಿ ತೂಕಡಿಸುತ್ತಾ ಕಥೆ ಹೇಳುತ್ತಿದ್ದ, ಅವನ ಅಕ್ಕನ ಮಕ್ಕಳ ಗುಂಪು ಅವನು ಕಥೆ ಹೇಳದಿದ್ದರೆ ನಿದ್ದೆ ಹೋಗಲು ಬಿಡುತ್ತಿರಲಿಲ್ಲ.

"ಯಾವ ಕಥೆ ಹೇಳಲಿ?...." ಕಾಮಣ್ಣನ ಕಥೆ"....ಎಲ್ಲಾ ಕೀರಲು ಗಂಟಲೂ ಒಂದೇ ಆಗಿ ಕಿರಲಿದವು. 'ಸರಿ' ಎನ್ನುತ್ತಾ ಹಾಗೆ ಒರಗಿ ಅರೆಕಣ್ಣು ಮುಚ್ಚಿ ಹೇಳಲು ತೊಡಗಿದ.

ಕಾಮಣ್ಣ, ಕಾಮಣ್ಣ ಅಂತ ಒಬ್ಬ ಇದ್ದ. ಮನ್ಮಥನೇ ಅವನು, ರೂಪಿನಲ್ಲಿ. ಆವನಿಗೂ ಒಬ್ಬ ಅಪ್ಪ, ಒಬ್ಬ ಅಮ್ಮ...ಅವನಿಗೆ ಮದುವೆಯ, ವಯಸ್ಸಾಗಿತ್ತು.

ಒಳ್ಳೆ ಬೇಸಿಗೆ; ಬಿಸಿಲಿಗೆ ಮಿದುಳೂ ಕರಗಿ, ಕದಡಿರುವ ಕಾಲ; ಗಂಡು ಹೆತ್ತವರ ಹೃದಯಾನೂ ಕರಗೀತು ಅನ್ನೊ ಧೈರ್ಯದಿಂದ ಹೆಣ್ಣು ಹೆತ್ತ ಬೊಮ್ಮಯ್ಯ ನೋರು ಕಾಮಣ್ಣನ ಅಪ್ಪನನ್ನು ಭದ್ರವಾಗಿ ಹಿಡಿದರು. "ಈಗ ಬೇಡ...." ಅಂತ ಅಂದರು ಕಾಮಣ್ಣನ ಅಪ್ಪ, ಆದರೆ ಆರು ಬೇಸಿಗೆಗಳಿಂದಲೂ ಪ್ರಯತ್ನಿಸಿ ಪಳಗಿದ ಬೊಮ್ಮಯ್ಯ

"ಚಿನ್ನದ ಬೆಲೆ ಕಮ್ಮಿಯಾಗಿದೆ; ಬಿದ್ದೇ ಹೋಗಿದೆ, ಈ ಬೇಸಿಗೆಯಲ್ಲಿ ಮದುವೆಯಾದರೆ ಅಳಿಯನಿಗೆ ಒಂದೆರಡು ಸೇರು ಚಿನ್ನ ಕೊಡೋಣ ಅಂತಿದ್ದೇನೆ...." ಹೀಗಂದುದನ್ನು ಕೇಳಿ ಅಪ್ಪ "ಮಗ ಒಪ್ಪಬೇಕು...." ಎಂಬುದಕ್ಕೆ ಬಂದರು.

ಆದರೆ ಕಾಮಣ್ಣನ ತಾಯೀನ ಒಪ್ಪಿಸಬೇಕಾದರೆ ಬೊಮ್ಮಯ್ಯನವರಿಗೆ ಸ್ವಲ್ಪ ತೊಂದರೆಯೇ ಆಯಿತು. ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರ ಎಲ್ಲ ಹೇಳಬೇಕಾ ಯಿತು. "....ನೋಡೇ, ಕಳ್ಳೇಕಾಯಿ ಬೆಲೆ ಬಿದ್ದುಹೋಗಿದೆ....ದೇಶದಾಚೆ ಕಳು ಸೋದಕ್ಕೆ ಹಾಕಿದ್ದ ಸುಂಕ ತೆಗೆದು ಹಾಕಿದ್ದಾರೆ ನಮ್ಮ ಸರ್ಕಾರ, ಇನ್ನು ಎಣ್ಣೆಬೆಲೆ ಮತ್ತೆ ಜಾಸ್ತಿಯಾಗುತ್ತಿದೆ ನೋಡೆ....ಹಾಗೇ ಸೀರೆ ಬೆಲೆ ಬಿದ್ದುಹೋಗಿದೆ...ಸೀರೇ ಮೇಲಿನ ಸುಂಕಾನೂ ತೆಗೀತಾರೆ....ಸೀರೆ ಎಲ್ಲಾ ಹೊರದೇಶಕ್ಕೆ ಹಾರಿ ಹೋಗುತ್ತದೆ ...ಆ ಮೇಲೆ ಸೀರೆ ಬೆಲೆ...."

ಅವರೂ ಒಪ್ಪಿದರು.

ಇನ್ನು ಹೆಣ್ಣು ತೋರಿಸಬೇಕಲ್ಲ, ಎಲ್ಲರನ್ನೂ ಕರೆದುಕೊಂಡು ಮನೆಗೆ ಹೋದರು. ಅಲ್ಲಿ ಸರಿಯಾಗಿ ಮೈಸೂರುಪಾಕ್ ತಿನ್ನಿಸಿ, ಕಾಫಿ ಕೊಡಿಸಿ,-ವೀಳೆಯ ದೆಲೆ ಮೆಲ್ಲಿಸಿ, ಹುಡುಗಿಯನ್ನು ತೋರಿಸಿದರು, ಒಳ್ಳೆ ಟ್ಯೂಬ್ ಲೈಟ್ ದೀಪ; ಬೇಸಿಗೆಯ ಸಂಜೆ, ಶಖೆಗೆ ಕರಗಿದ ಮೆದುಳು ಗಟ್ಟಿಯಾಗುತ್ತಿರುವ ಸಮಯ. ಮುಖಕ್ಕೆ ಮೆಡಿಕಲ್ ಕಾಲೇಜು ವಿದ್ಯಾರ್ಥಿನಿಯ ಮೇಕಪ್....ಭ್ರಾಂತನಾದ ಕಾಮಣ್ಣ. "ಏನಪ್ಪಾ ನಿನ್ನ ಅಭಿಪ್ರಾಯ" ಅಂತ ಕೇಳಿದ್ದಕ್ಕೆ 'ರತಿ' ಅಂತಂದ, ನಿಟ್ಟುಸಿರೂ ಬಿಟ್ಟ ..ಮದುವೆಯೂ ಗೊತ್ತಾಯಿತು ಧಾರಾಮಂಟಪ. ಹೊಗೆ ಮುಂದೆ ಕೂತೂ ಕೂತೂ ಕಣ್ಣು ಕೆಂಪಾಗಿತ್ತು. ಮನಸ್ಸು ಬೇಗೆಯಿಂದ ಹಣ್ಣಾಗಿತ್ತು. ..ಇನ್ನೇನು ಧಾರೆ ...ತೆರೆ....ಮನ್ಮಥ, ರತಿ. .

"ತೆರೆ....ತೆರೆ....ಎಷ್ಟೊತ್ತು....ತೆಗೆಯಬಾರದೆ?"

ತೆರೆಯನ್ನೂ ತೆಗೆದರು. ಆತುರದಿಂದ ನೋಡಿದ. "ತನ್ನ ರಾಣಿ?.. .ತನ್ನ ರತಿ?....ಇವಳನ್ನೇ ತಾನು ಅಂದು ನೋಡಿದುದು!"

ತಲೆ ತಿರುಗಿತು, ಕಣ್ಣು ಕತ್ತಲೆ ಕಟ್ಟಿಕೊಂಡು ಬಂತು ತಲೆಯಮೇಲೆ ಬೆಲ್ಲ ಜೀರಿಗೆ ಬಿತ್ತು. ಅವನು, ಎದುರಿಗಿದ್ದ ಬೆಂಕಿಯಲ್ಲಿ ಬಿದ್ದುಬಿಟ್ಟ....ಮುಖ ಮೂತಿ ಎಲ್ಲಾ ಸುಟ್ಟು ಹೋಯಿತು....ಅದಕ್ಕೆ ಕಾಮನಿಗೆ ಸುಟ್ಟ ಮೋರೆ ಅಂತ ಹೇಳುವುದು."

ಮುಗಿಯಿತು ಅವನ ಕಥೆ "ಎಲ್ಲಾ ಸುಳ್ಳು ಕಥೆ" ಅಂತ ಚೀರಿದವು ಮಕ್ಕಳೆಲ್ಲಾ. ಅವನು ನಿದ್ದೆ ಹೋಗಿದ್ದ....

ಅಲ್ಲಾ....ಈ ತರಹದ ಕಥೆ ಹೇಳಬಹುದೇ ಮಕ್ಕಳಿಗೆ...ಬೆಳಗಿನಿಂದ ಹೊಗೆ ಕುಡಿದೂ ಕುಡಿದೂ ಸುಸ್ತಾಗಿ ಕಾಮಣ್ಣ ಬಿದ್ದಿರಬಹುದಲ್ಲವೆ?

"ಅಸುರಾ"

— o —

ಹೋಟಲಿನಲ್ಲಿ

ಇಂದ್ರಭವನದಲಿ ಚಂದ್ರಮೂಡಿತಾ
ದೋಸೆ ಹಂಚಿನಲ್ಲಿ
ಮೂಡಿತೆಂಬೆಯಾ? ಮತ್ತೆ ಮುಳುಗಿತೋ
ಉದರ ಗಗನದಲ್ಲಿ?

—ದಿಬ್ಬಯ್ಯ.

ಉದಯದ ಒಸಗೆ

[ಶ್ರೀ ಡಿ. ವಿ. ಜಿ. ಯರವರ ಕ್ಷಮೆ ಬೇಡಿ]

ಏಳೆನ್ನ ಮನದನ್ನೆ! ನೋಡು, ಆಗಲೆ ಎದ್ದು
ತೊಳೆದ ಬೋಗುಣಿಯೊಳಗೆ ಹಸುವಿನ್ಹಾಲನು ಕರೆದು
ಸೌದೆ ಬೆರಣಿಗಳನೊಲೆಯಲ್ಲಿ ರೆಡಿ ಮಾಡಿಹೆನು;
ನಿದ್ದೆ ಸಾಕಿನ್ನೀಗ ಮುದ್ದುಗಿಣಿ ಬಾರ. ॥ ೧ ॥

ಕನಸೊಂದ ಮುಂಜಾವದಲಿ ಕಂಡೆನೇನೆಂಬೆ
ನಾಗಸದಿಂದೆ ನದ್ದೊಂದಂದುದಿಂತು
" ಏಳಿರೆಲೆ ಮಕ್ಕಳಿರ, ಚೀಲವನು ತುಂಬಿಕೊಳಿ
ರೇಷರ್ ದವಸಗಳ ರೇಟು ಏರಿ ಬಿಡುವೀ ಮುನ್ನ." ॥ ೨ ॥

ಬಾ ತುಂಬು ಬಟ್ಟಲನು, ಇಂಡಿಯರ್ ಕಾಫಿಯಲಿ
ಕಾಫಿ ಕೆಡುಕೆಂಬ ಹಳೆಕಂತೆಯನು ಬಿಸುಡು;
ಕಾಫಿ ಯೆಂಬಾ ಕುಡಿತ ತೋರ್ವಸಂತಸ ಹಿರಿದು,
ತೋರುವುದದು ನೋಡು; ಬಾ. ಮನಸು ಮಾಡು. ॥ ೩ ॥

ಹಿಂದೆಸೆಯ ತಿಂಗಳಿನ ಸಾಲಕ್ಕೆ ಎಣೆಯಿಲ್ಲ,
ಮುಂದೆಸೆಯ ಖರ್ಚುಗಳ ನೆಣಿಸಲಳವಲ್ಲ;
" ಪೇ" ದಿನಗಳಲೆರಡು ದಿನ ನೀವು ನಾವೆಂಬನುಡಿ
ಯಾಡುವೆವು, ಬಳಿಕೆಲ್ಲ ನೀವು....ನಾವುಗಳು ॥ ೪ ॥

ಸಂಸಾರದೀ ಮುರುಕು ಕರ್ಮ ಶಾಲೆಯೊಳಬಬ!
ಎಡರು ತೊಡರುಗಳೆಂಬ ಬಾಗಿಲೆರಡರಲಿ
ಹುಲು ಮನುಜರೇಸು ಜನ ರಟ್ಟಹಾನದಿ ಪೊಕ್ಕು
ದಿನವೆರಡು ನಲಿದಿದ್ದು ಮರಳಿ ಬಳಲಿಹರು! ॥ ೫ ॥

ಹಳ್ಳ ಕೊಳ್ಳಗಳಿಂದೆ—ಮುಳ್ಳುಕಲ್ಲುಗಳಿಂದೆ—
ಎನ್ನ ಬೀದಿಯೊಳೆಡವಿ ಬೀಳಿಸುವ ಬಿದಿಯೆ,
ನೀನೆನ್ನ ಮೇಲೆ ಸಂಸರದ ಹೊರೆಯ ಹೊರಿಸಿಂತು
ಕರುಮ ಬಂಧನದೊಳಗೆ ಸಿಲುಕಿಪುದು ತರವೆ.? ॥ ೬ ॥

—ಮಣಿ.

ಉಪಾಧ್ಯಾಯರ ಪ್ರಚಾರ ಪತ್ರಿಕೆ

[ಮೇಲ್ಮನೆ ಚುನಾವಣೆಯಲ್ಲಿ]

(ಹಾ. ರಾ.)

ಸಂಸ್ಥಾನದ ಉಪಾಧ್ಯಾಯ ಮತದಾರರ ಸನ್ನಿಧಿಯಲ್ಲಿ ವ್ಯಾಸರಾಯನ ವಿಜ್ಞಾಪನೆಗಳು—

ಉಪಾಧ್ಯಾಯ ಕ್ಷೇತ್ರದಿಂದ ನಾನು ಮೇಲ್ಮನೆ ಚುನಾವಣೆಗೆ ಉಮೇದುವಾರನಾಗಿ ನಿಂತುಕೊಂಡಿರುವ ವಿಚಾರವನ್ನು ನಾನು ಈ ಮೂಲಕ ನಿಮ್ಮ ಗಮನಕ್ಕೆ ತರಲು ಆಶಿಸುತ್ತೇನೆ. ಸಂಸ್ಥಾನದ ಇಡೀ ಉಪಾಧ್ಯಾಯ ವರ್ಗಕ್ಕೆ ಪ್ರತಿನಿಧಿಯಾಗಿ ಸೇವೆಮಾಡಲು ನನಗಿರುವಷ್ಟು ಯೋಗ್ಯತೆ ಮತ್ತಾವ ಉಮೇದುವಾರನಿಗೂ ಇಲ್ಲವೆಂದು ಧೈರ್ಯವಾಗಿ ಹೇಳಬಲ್ಲೆ. ಇಡೀ ಉಪಾಧ್ಯಾಯ ವರ್ಗವನ್ನು ಪ್ರತಿಬಿಂಬಿಸುವಂತಹ ಸ್ವರೂಪವನ್ನು ನಾನು ಪಡೆದಿರುವುದು ಹೆಮ್ಮೆಯ ವಿಷಯ. ಎಲ್ಲಾ ಮಾಸ್ತರುಗಳಿಗೂ ಮೆಚ್ಚಿಗೆಯಾಗುವಂತಹ ಇನ್ನೂ ಹಲವಾರು ಲಕ್ಷಣಗಳು ನನ್ನಲ್ಲಿ ತುಂಬಿವೆ. ಇಪ್ಪತ್ತು ವರ್ಷಗಳಿಂದ ಸತತ ದುಡಿದು ಸಾಕಷ್ಟು ಕಷ್ಟ ಕೋಟಲೆಗಳನ್ನು ಅನುಭವಿಸಿರುವ ನನಗೆ—ಉಪಾಧ್ಯಾಯ ಜೀವನದ ಹೇನು-ಜೇನುಗಳೇನು? ಮಾಸ್ತರ ಜೀವನ ಎತ್ತಸಾಗಿದೆ?—ಎಂಬ ವಿಚಾರಗಳು ಗೊತ್ತಿರುವಷ್ಟು ಮತ್ತಾವ ಉಮೇದುವಾರನಿಗೂ ಗೊತ್ತಿರಲಿಕ್ಕಿಲ್ಲ. ಇದು, ಉಪಾಧ್ಯಾಯರ ಹಿತರಕ್ಷಣೆಗೆ ಹೊಡೆದಾಡಲು ನನ್ನಲ್ಲಿರುವ ದಕ್ಷತೆಯನ್ನು ತೋರಿಸುತ್ತದೆ!

ಇವತ್ತಿನವರಿಗೆ ಪಟ್ಟಿ ತಯಾರು ಮಾಡಿದರೆ ನನಗಿರುವಷ್ಟು ಸಾಲಗಾರರ ತಂಡ ಬೇರಾವ ಉಪಾಧ್ಯಾಯನಿಗೂ ಇಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ನಾನು ಈಗ ಕಟ್ಟಿರುವ ಡಿಪಾಜಿಟ್ಟು ಹಣ ಸಹ ಸಾಲಮಾಡಿ ತಂದಿದ್ದೆ. ಕೇವಲ ನಿಮ್ಮ ಮೆಚ್ಚಿಗೆಗೋಸ್ಕರ ಹೀಗೆ ಬರೆದು ನಿಮ್ಮ ಅಮೂಲ್ಯವಾದ ಪ್ರಥಮ ಮತವನ್ನು ಕಸಿದುಕೊಳ್ಳಲು ನಾನು ಪ್ರಯತ್ನಿಸುತ್ತಿಲ್ಲ. ನನ್ನಾಣೆ ಇವೆಲ್ಲ ಅಕ್ಷರಶಃ ನಿಜ! ಮಾನ್ಯಮತದಾರರೆ, ಮುಖ್ಯವಾಗಿ ನಾನು ಹೇಳುವುದಿಷ್ಟೆ. ಇದ್ದಿದ್ದನ್ನು ಇದ್ದಹಾಗೆ ಹೇಳುವ ಸ್ವಭಾವ ನನ್ನದು. ನನಗಿಂತಲೂ ಶ್ರೇಷ್ಟ ಪ್ರತಿನಿಧಿ ಖಂಡಿತ ನಿಮಗೆ ದೊರಕಲಾರನು. ನಿತ್ಯೋಪವ್ಯಾಸದಲ್ಲಿ ನನ್ನಷ್ಟು ನುರಿತವರು ಈಗಿರುವ ಉಮೇದುವಾರರ ಪಟ್ಟಿಯಲ್ಲಿ ಯಾರೂ ಇಲ್ಲ ಎಂಬುದನ್ನು ಒತ್ತಿ ಹೇಳ ಬಯಸುತ್ತೇನೆ. ಸಹೃದಯ ಸಹೋದ್ಯೋಗಿಗಳೆ—ಮೇಲ್ಕಂಡ ಕಾರಣಗಳನ್ನು ಚೆನ್ನಾಗಿ ವಿಮರ್ಶಿಸಿ ನಿಮ್ಮ ಪ್ರಥಮ ಮತವನ್ನು ನನಗೇ ಕೊಟ್ಟು ನನ್ನನ್ನು ನಿಮ್ಮ ಪ್ರತಿನಿಧಿಯಾಗಿ ಆರಿಸುತ್ತೀರಾಗಿ ನಂಬಿರುವ,

ವ್ಯಾಸರಾಯ
(ಉಪಾಧ್ಯಾಯರ ಕ್ಷೇತ್ರ)

ರಾಮೋತ್ಸವ

ನಮ್ಮೂರಿನಲ್ಲಿ ಈ ಸಾರಿಯೂ ಎಲ್ಲೆಲ್ಲೂ ರಾಮೋತ್ಸವವು ವಿಜೃಂಭಣೆಯಿಂದಲೂ, ವಿವಿಧ ರೀತಿಗಳಿಂದಲೂ ಆಚರಿಸಲ್ಪಟ್ಟಿತು. ಅದರಲ್ಲಿ, ವರ್ತಮಾನ ಪತ್ರಿಕೆಗಳಲ್ಲಿ ವರದಿಯಾಗಿರುವ ಒಂದು ಸಮಾರಂಭದ ವಿವರಗಳು ಕೆಳಗೆ ಕೊಡಲ್ಪಟ್ಟಿವೆ.

ರಾಮಸೇವಾ ಸಪ್ತಾಹ

(ನಿರ್ವಾಹಕರು :—ಶ್ರೀಯುತ ರಾಮಪ್ರಸಾದ್‌ರವರು;
ಪ್ರೊಪ್ರೈಟರ್, "ಹಿಮಕಿರಣ್" ಕೂಲ್‌ಡ್ರಿಂಕ್ಸ್ ಕಾರ್ಖಾನೆ.)

ಬುಧವಾರ (9-4-52)ರ ಕಾರ್ಯಕ್ರಮ :—

1) ರೆಕಾರ್ಡ್ ಪ್ರೋಗ್ರಾಂ.
2) ಸಂಗೀತ; ವಿದ್ವಾನ್ ಸ್ವರಮೂರ್ತಿ ಸೇತೂರಾಮ ಭಾಗವತರಿಂದ.
3) ಶ್ರೀಮದ್ ರಾಮಾಯಣ; (ವಿಮರ್ಶಾತ್ಮಕ ಭಾಷಣ)—ಲೋಕ ಸಭಾಸದಸ್ಯರಾದ ಶ್ರೀಮಾನ್ ಲಕ್ಷ್ಮಣಯ್ಯನವರಿಂದ.
4) ವಂದನಾರ್ಪಣೆ.
5) ಪ್ರಸಾದ ವಿನಿಯೋಗ ಮತ್ತು ಮಂಗಳ.

ಕಾರ್ಯಕ್ರಮದ ಮೊದಲನೇ ಅಂಗವಾಗಿ ಲೌಡ್‌ಸ್ಪೀಕರ್ (ಅ)ವ್ಯವಸ್ಥೆಗೆ ಜವಾಬ್ದಾರರಾಗಿದ್ದ 'ಅಶರೀರವಾಣಿ' ಕಂಪೆನಿಯವರು, 'ಪರನಾರೀ ಕಾ ಪ್ಯಾರ್', 'ವಂಚನೆಯ ಸಂಚು', 'ರೊಂಡಾ ಪೆಳ್ಳಿ', 'ಖೂನ್ ಕಾ ತೂಫಾನ್', ಮೊದಲಾದ ಪ್ರಸಿದ್ಧ ಪಿಕ್ಚರುಗಳ ರೆಕಾರ್ಡುಗಳನ್ನು ಮತ್ತು ಮೊಹಮ್ಮದ್ ರಫಿ, ಷಂಷಾದ್‌ಬೇಗಂ, ತಾಲಾತ್ ಮಹಮ್ಮದ್, ಅಮೀರ್‌ಬಾಯ್ ಮುಂತಾದವರು ಹಾಡಿರುವ ಗೀತೆಗಳ ರೆಕಾರ್ಡುಗಳನ್ನೂ ಸುಮಾರು ಒಂದು ಘಂಟೆಕಾಲ ಹಾಕಿದರು.

ಮುಂದಿನದಾದ ಸಂಗೀತ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆಯಾಗಬೇಕಾಗಿ ಬಂತು. ಸ್ವರಮೂರ್ತಿಗಳಿಗೆ,—ನಾಲ್ಕಾರುಕಡೆ ರಾಮೋತ್ಸವ ಸಂಭ್ರಮದಲ್ಲಿ ಕಿರಚಿದ್ದ

ರಿಂದಲೋ, ಅಥವಾ ಪಾನಕ ಪನ್ಯಾರಗಳ ಪ್ರಭಾವದಿಂದಲೋ—ಗಂಟಲುಕಟ್ಟಿ, ಸ್ವರವೇ ಹೊರಡದಂತಾಗಿದೆಯೆಂದು ವಿಷಾದ ಪೂರ್ವಕವಾದ ವಿಷಯವನ್ನು ಕೊನೆಯ ಘಳಿಗೆಯಲ್ಲಿ ಹೇಳಿಕಳಿಸಿವರು. ಆಗ, ಸಭಿಕರಲ್ಲಿದ್ದ ಗೀತಾ—ಲತಾ ಸೋದರಿಯರು, ಉದಾರ ಬುದ್ಧಿಯಿಂದ ಹಾಡಲು ತಾವಾಗಿಯೇ ಎದ್ದುದ್ದು ಸ್ತೋತ್ರಾರ್ಹವಾದ ಸುದ್ದಿ. ಅವರು ಒಂದೂವರೆ ಘಂಟೆಗಳಕಾಲ ಅಮೋಘವಾಗಿ ನಡೆಸಿದ ಫಿಲಂ ಗೀತೆಗಳ ಕಛೇರಿಯಲ್ಲಿ, 'ಡಡಡಾ ಡಡಡಾ', 'ಟಟಟಾ ಟಟಟಾ', 'ಪ್ರೇಮವೋ ಕಾಮವೋ' 'ಮಮ್ಮಮ್ಮಮ್ಮ ತೇರಿಹೋ', 'ಪ್ಯಾರಕೀ ರಾತೇಂ', 'ಲಾರಲಪ್ಪ ಲಾರಲಪ್ಪ' ಮೊದಲಾದುವು ಬಹು ಮಧುರವಾಗಿದ್ದುವು.

ನಂತರ, ಮಾನ್ಯ ಭಾಷಣಕಾರರು ರಾಮಾಯಣದಮೇಲೆ ವಿಮರ್ಶೆಯನ್ನು ಸೊಗಸಾಗಿ ಮಾಡಿದರು. ಅವರ ಪೂರಾ ಭಾಷಣವನ್ನು ವರದಿಮಾಡಲು ಆರು ಕಾಲಮ್ಮಾದರೂ ಬೇಕಾಗುವುದರಿಂದ, ಅಲ್ಲಲ್ಲಿ ಕೆಲವು ಸ್ವಾರಸ್ಯವಾದ ವಿಚಾರಗಳನ್ನು ಮಾತ್ರ ಎತ್ತಿಕೊಟ್ಟಿದೆ:—

"...........ರಾಮಾಯಣದ ಕತೆ ಓದಿದರೆ ಶುದ್ಧ ಹೇಡಿಗಳ ಸಂತೆ ಅಂತ ನಮಗೆ ಅನ್ನಿಸುವುದಲ್ಲವೆ? 'ಅವುವತ್ತಕ್ಕೆ ಅರುಳೂ ಮರುಳೂ' ಅಂತ ಕಿರೀ ಹೆಂಡತೀ ಮಾತಿಗೆ ಕಿವಿಗೊಟ್ಟನಲ್ಲಾ ದಶರಥ—ಈಗಿನವರಾದ ನಮ್ಮಂಥಾವರಾಗಿದ್ದರೆ ಏನು ಮಾಡುತ್ತಿದ್ದೆವು ಹೇಳಿ?........ಮಂತ್ರಿಮಂಡಳದವರು ತಕ್ಷಣ ಸಭೆಸೇರಿ, ರಾಜನ ಮೇಲೆ 'ನೋ ಕಾನ್ಫಿಡೆನ್ಸ್ ಮೋಷನ್' ಜಾರಿ ಮಾಡಿಬಿಡುತ್ತಿದ್ದೆವು. ಅವನನ್ನ ಪದಚ್ಯುತನನ್ನಾಗಿ ಮಾಡಿ ರಾಮನ್ನ ಸಿಂಹಾಸನದಮೇಲೆ ಕೂರಿಸುತ್ತಿದ್ದೆವು;—ಆಗ ನಮಗೂ ಅನುಕೂಲವಾಗುತ್ತಿತ್ತೂನ್ನಿ. ರಾಜ....ನಾವ್ಹೇಳಿದಹಾಗೆ....ಕೇಳಿಕೊಂಡಿ ರುತ್ತಿದ್ದ! ...ಅಥವಾ, ಆ ಮಂತ್ರಿಮಂಡಳಕ್ಕೆ ಅಷ್ಟು ಧೈರ್ಯ ಇರಲಿಲ್ಲಾಂತ ಇಟ್ಕೊ ಕೊಳ್ಳೋಣ. ಆಗ ಪ್ರಜೆಗಳೇ ಸೇರಿ, ಆ ಮಂತ್ರಿಮಂಡಳಾನೇ ಉರುಳಿಸಿ, ಸರಿ ಯಾದ ಮಂತ್ರಿಗಳ್ನ ಚುನಾಯಿಸಿಬಿಡ್ತಿದ್ವು!....ಅದು ಬಿಟ್ಟು, ಆ ಮುಖ್ಯಮಂತ್ರೀ ಅನ್ನಿಸಿಕೊಂಡೋನು, ಸುಮಂತ,—ರಾಮನ್ನ ಕಾಡಿನ ಬಾಗಿಲಿನವರೆಗೂ ಬಿಟ್ಟು ಬಂದು, ಗೋಳೋ ಅಂತ ಅಳುತ್ತಾ ಕೂತನಂತೆ! ಹೇಡಿತನದ ಹೆಗ್ಗುರುತಿಗೆ ಇನ್ನೇನು ಬೇಕು!....ರಾಮತಾನೇ ಇನ್ನೇನು? ಏನೋ ಒಂದು ಬಟ್ಟೆ ಹೊಲಿಸೋದ್ರಲ್ಲೋ, ಸ್ನೇಹಿತರ ಮನೆಗೆ ಹೋಗೋದ್ರಲ್ಲೋ, ಇಲ್ಲ ಹೆಣ್ಣು ಒಪ್ಪೋದ್ರಲ್ಲೋ ಪಿತೃವಾಕ್ಯ ಪರಿಪಾಲಕನಾಗಿರ್ಲಿ, ಪರವಾಗಿಲ್ಲ, ಇರಬೇಕಾದ್ದೇ. ಆದರೆ, ಕಾಡಿಗೆ ಹೋಗೋ ಮಗನೇ ಅಂದರೆ ಕೂಡ಼್ಲೆ 'ಕೂಲಾ'ಗಿ ಹೊರಟೇಬಿಡೋದೇ! ಲಕ್ಷ್ಮಣನೋ— ಅಂದ್ಹಾಗೆ ನಾನು ನನ್ನ ಹೆಸರು ಬದಲಾಯಿಸಬೇಕೆಂದಿದೇನೆ ಸಧ್ಯದಲ್ಲೇ—ನಾನೂ ಬಂದೆ ಅಂತ ಹಿಂದೆ ಹೊರಟದಾನಲ್ಲ! ಕಾಡಿನಲ್ಲೇನು ಅಣ್ಣನ ಕೂಡ ಕ್ರಿಕೆಟ್ ಆಡ ಬೇಕೇ ಇಲ್ಲ ಟೆನ್ನಿಸ್ ಸಿಂಗಲ್ಸೋ!....ಸೀತೆ ತಾನೇ ಇನ್ನೇನು? ಜೀವನಾಂಶ ವಸೂ

ಲ್ಯಾಡಿಕೊಂಡು ಹಾಯಾಗಿ ಅಯೋಧ್ಯೆಯಲ್ಲೇ ಇದ್ದಿದ್ರೂ ಆಗಿತ್ತು, ಅಥವಾ ರಾಮನ ಬದಲು ನಾನೇ "ಯುವರಾಜ್ ಪ್ರಮುಖ್" ಆಗಿರ್ತೀನಿ ಅಂತ ಹೊಡೆ ದಾಡಿದ್ರೂ ಆಗಿತ್ತು!....ಹೀಗೇ, ಹನುಮಂತನ ಕಪಿಚೇಷ್ಟೆ, ವಿಭೀಷಣನ ವೀರತ್ವ, ಎಲ್ಲ ನಾಚಿಕೆಗೇಡಿನ ಬಾಬ್ತೇ! ಅಂತೂ ಒಟ್ಟಿನಲ್ಲಿ, ರಾಮಾಯಣ ಅಂದ್ರೆ ಗೋಳೇ ಅನ್ನಿ. ನಾವೂ ಸಹ, ಆತನನ್ನೂ ಆತನಿಗೆ ಬಂದ ತಾಪತ್ರಯಗಳನ್ನೂ ನೆನೆಸಿಕೊಂಡು, ವರ್ಷಕ್ಕೊಮ್ಮೆ ತಾಪತ್ರಯಗಳನ್ನೂ ನೆನೆಸಿಕೊಂಡು, ವರ್ಷಕ್ಕೊಮ್ಮೆ ರಾಗರಾಗದ ಸಂಗೀತಗಳೊಡನೆ, ಗೋಳಾಡುತ್ತೇವೆ!

ಅಂದರೆ, ಈ ಉತ್ಸವ ನಡೆಸೋದರಿಂದ ಲಾಭಗಳಿಲ್ಲ ಅಂತ ತಿಳಿದುಕೊಳ್ಳ ಬೇಡಿ, ಇದೆ!....ಮುಕ್ಕಾಲು ಮೂರು ವೀಸೆ ಪಾಲು ಜನ ನಮ್ಮೂರಲ್ಲಿ ವಾಸ ಮಾಡೋದು ಗುಬ್ಬಚ್ಚಿ ಗೂಡಿನಂತಹ ಮನೆಗಳಲ್ಲಿ. ಬೇಸಿಗೇಲಿ ಬೆಂದ್ಹೋಗತ್ತೆ. ಧರ್ಮಾತ್ಮರು ಹಾಕಿಸಿರೋ ಚಪ್ಪರಗಳಲ್ಲಿ, ಹಾಯ್ ಅಂತ ಮೂರು ನಾಲ್ಕು ಘಂಟೆ ಕಾಲ ತಂಗಾಳಿ ಸೇವನೆ ಮಾಡಿಕೊಂಡು ನಿದ್ದೆಮಾಡಬಹುದು....ಅಂದ್ರೆ, ಆ ಸಾಲು ಸಾಲು ಖಾಲೀ ಮನೆಗಳಿಗೆ ಕಳ್ಳ ನುಗ್ಗಿ, ಲೂಟಿ ಹೊಡೆದುಕೊಂಡು ಹೋದಾನೇನೋ ಸರಾಗವಾಗಿ ಎಂಬ ಭಯ ಮೊದಲಿಗೆ ಬಾಧಿಸ್ತಿತ್ತು. ಈಗ ಅದೂ ಯೋಚನೆಯಿಲ್ಲ! ಕೊಡೋ ರೂಪಾಯಿಗೆ ಬಂದೂವರೆಸೇರಕ್ಕಿಯಲ್ಲಿ, ಯಾರ ಮನೆಯಲ್ಲೂ ಯಾವ 'ಸ್ಟಾಕೂ' ಇರೋದಿಲ್ಲ!....ಇನ್ನೂ ಒಂದು ಅನುಕೂಲ ಇದೆ ಈ ಉತ್ಸವದಿಂದ. ಈ ಹದಿನೈದು ದಿನ ತಿಂಗಳು,—ವಾರಭವಿಷ್ಯದಲ್ಲಿ ಹೇಳೋ ಹಾಗೆ—ಪತಿ ಪತ್ನಿಯರಲ್ಲಿ ಶಾಂತಿ ನೆಲೆಸಿರುತ್ತೆ! ಏಕೆಂದರೆ, ಅವರಿಬ್ಬರಿಗೂ ಜಗಳಕ್ಕೆ ಅವಕಾಶ ಸಿಕ್ಕೋದೇ ರಾತ್ರಿ ಎಂಟರಿಂದ ಹತ್ತರವರೆಗೆ, ಬೆಳಗೆಲ್ಲ ಅಡಿಗೆ ಕೆಲಸ ಹೆಂಗಸಿಗೆ, ಅಫೀಸಿನ ಅವಾಂತರ ಗಂಡಸಿಗೆ, ಏನಿದ್ರೂ ವ್ಯಾಜ್ಯಕ್ಕೆ ಮೇಲೆ ಹೇಳಿದ ಕಾಲವೇ ಮುಹೂರ್ತ. ಆದರೆ, ಈ ಒಂದು ತಿಂಗಳೂ ಸಧ್ಯ ಎಲ್ಲ ಕಡೇಲೂ 'ಗೃಹಶಾಂತಿ' ನೆಲೆಸಿರುತ್ತೆ!....

ವಂದನಾರ್ಪಣೆಯಾದನಂತರ, 'ಹಿಮಕಿರಣ್'ರವರ ಸ್ಪೆಷಲ್ ಐಸ್‌ಕ್ಯಾಂಡಿ ಮತ್ತು ಕ್ರಷ್‌ಗಳ ವಿನಿಯೋಗವಾದಮೇಲೆ, ಮಂಗಳದೊಂದಿಗೆ ಆ ದಿನದ ರಾಮೋ ತ್ಸವ ಮುಕ್ತಾಯವಾಯಿತು.

—ಸುನಂದಮ್ಮ.

ಪತ್ರಿಕಾಗೋಷ್ಠಿ

ಈಚಿನ ಪದ್ಧತಿಯಂತೆ, ರಾಜೀವಪುರದ ಸಾಹುಕಾರ್ ಅಣ್ಣಯ್ಯನವರೂ, ಮೊನ್ನೆ ಸ್ಥಳೀಯ ಪತ್ರಿಕಾ ಪ್ರತಿನಿಧಿಗಳನ್ನೆಲ್ಲ ಆಹ್ವಾನಿಸಿ ಚೊಕ್ಕಭೋಜನವಿತ್ತು, ಒಂದು ಪತ್ರಿಕಾ ಗೋಷ್ಠಿಯನ್ನು ನೆರವೇರಿಸಿದರು. ಅವರ ಮಗಳ ಮದುವೆ ಸಂಬಂಧವಾದ ಅಂಕಿ ಅಂಶಗಳನ್ನೊಳಗೊಂಡ ಒಂದು ಹೇಳಿಕೆಯನ್ನಿತ್ತರು. ಸುಮಾರು ಹದಿನೈದು ಸಹಸ್ರ ರೂಪಾಯಿ ಖರ್ಚು ಬಿತ್ತೆಂಬುದನ್ನೂ ನಾಲ್ಕು ಸಾವಿರದ ಐನೂರು ಸಾಲವಾಗಿಯೂ ಉಳಿದದ್ದನ್ನು ತಮ್ಮ ನಗದು ಗಂಟನ್ನು ಕರಗಿಸಿಯೂ ಒದಗಿಸಲಾಯಿತೆಂದು ಹೊರಗೆಡಹಿದರು. ಬೆಲ್ಲ ತುಪ್ಪ ಅಕ್ಕಿ ಊದುಬತ್ತಿ ಇಸ್ಪೀಟುಕಟ್ಟು ಊಟದೆಲೆ ಮುಂತಾದುವುಗಳು ಉಳಿಕೆಯಾಗಿರುವುದು ಎಷ್ಟೆಂಬುದನ್ನೂ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಲಾಯಿತು. ಮಗಳಿಗೂ ಅಳಿಯನಿಗೂ ಉಡುಗೊರೆ ವಗೈರೆ ಕೊಟ್ಟ ಮಹನೀಯರ ಪಟ್ಟಿಯೊಂದನ್ನು ಎಲ್ಲರಿಗೂ ಹಂಚಲಾಯಿತು. ಹಿಂದೆ ಸಾಹುಕಾರರು ಕೊಟ್ಟ ಉಡುಗೊರೆಗಳಿಗೆ ಪ್ರತಿಯಾಗಿ, ಈಗ ಮುಯ್ಯಿಗೆ ಮುಯ್ಯಿ ತೀರಿಸಿದವರ್ಯಾರು, ಅದರಲ್ಲಾದ ಲಾಭನಷ್ಟಗಳೆಷ್ಟು, ಎಂಬ ವಿವರಗಳೆಲ್ಲವೂ ಪಟ್ಟಿಯಲ್ಲಿ ಪ್ರಕಟವಾಗಿತ್ತು.

ಪತ್ರಿಕಾ ಗೋಷ್ಠಿಗೆ ಶ್ರೀ ಅಳಿಯಂದಿರೂ ಆಗಮಿಸಿ ಸಮಾರಂಭಕ್ಕೆ ವಿಶೇಷ ಕಳೆಯನ್ನು ದಯಪಾಲಿಸಿದರು. ಸಾಹುಕಾರರ ಕೋರಿಕೆಯ ಮೇಲೆ ಅವರೂ ಎರಡು ಮಾತುಗಳನ್ನಾಡಿ, ತಮ್ಮ ಮದುವೆ ಸಾಂಗವಾಗಿ ನೆರವೇರಿದ್ದಕ್ಕೆ, ಮಾವನವರಿಗೂ ಊರಿನ ಅಧಿಕಾರಿಗಳಿಗೂ ವಿದ್ಯುಚ್ಛಕ್ತಿ ಇಲಾಖೆಗೂ, ಮೈಕ್ ವ್ಯವಸ್ಥೆಯ ಕಂಪನಿಗೂ ಜೋಯಿಸರೇ ಆದಿಯಾಗಿ ಅಡಿಗೆಯವನವರೆಗೆ ಎಲ್ಲರಿಗೂ ವಂದನೆಗಳನ್ನರ್ಪಿಸಿದರು. ವರನ ತಾಯಿಯೂ ಅಕ್ಕನೂ ಶಾಂತರೀತಿಯಿಂದ ವರ್ತಿಸಿ, ಬೀಗರಲ್ಲುಂಟಾಗಲಿದ್ದ ತಕರಾರುಗಳನ್ನೆಲ್ಲ ಪರಿಹರಿಸಿದ್ದನ್ನು, ಪತ್ರಿಕಾ ಪ್ರತಿನಿಧಿಗಳು ಪ್ರತ್ಯೇಕವಾಗಿ ಪರಿಗಣಿಸಬೇಕೆಂದು ಅಣ್ಣಯ್ಯನವರು ಸಲಹೆಯಿತ್ತರು. ಅಡಿಗೆಯವನ ಹೆಸರು ವಿಳಾಸಗಳನ್ನು ಪ್ರಕಟಿಸುವುದಾಗಿ ಪ್ರತಿನಿಧಿಗಳು ಉದಾರ ಚಿತ್ತದಿಂದ ಭರವಸೆಯನ್ನು ನೀಡಿದರು.


ಮದುವೆ ಸಮಯದಲ್ಲಿ ಕಳವುಹೋದ ಮೂರು ಬೆಳ್ಳಿ ಬಟ್ಟಲುಗಳನ್ನೂ ಮುರಿದು ಹೋದ ನಾಲ್ಕು ಸುಂದರ್ ಚೇರುಗಳನ್ನೂ ಸದರಿ ಪದಾರ್ಥಗಳನ್ನು ಸಾಲಕೊಟ್ಟಿದ್ದ ಮಹನೀಯರಿಗೆ ತಲುಪಿಸುವುದಾಗಿ ಅಣ್ಣಯ್ಯನವರು ಬಹಿರಂಗವಾಗಿ ತಿಳಿಸಿದಾಗ, ಸಭೆಯಲ್ಲಿ ಕರತಾಡನಗಳೆದ್ದುವು.

ನಿಮ್ಮ ಮಗಳನ್ನು ಇನ್ನು ಮುಂದೆ ಶಾಲೆಗೆ ಕಳುಹಿಸುವಿರಾ, ಎಂಬ ಪ್ರಶ್ನೆಗೆ, ಅಣ್ಣಯ್ಯನವರು “ಆ ಪ್ರಶ್ನೆಯನ್ನು ನೀವು ನನ್ನ ಅಳಿಯಂದಿರಿಗೆ ಹಾಕುವುದು ಮೇಲಲ್ಲವೆ?” ಎಂದು ಹೇಳಿದರು. ಅಳಿಯಂದಿರು ಮಂದಸ್ಮಿತವದನರಾಗಿ ಮಾತಾಡದೆ ಕುಳಿತಿದ್ದುದನ್ನು ನೋಡಿದರೆ, ಮುಂದಿನ ಓದಿಗೆ ಸೊನ್ನೆಯೇ ಎಂದು ಹಲವು ಪ್ರತಿನಿಧಿಗಳು ಊಹಿಸಿದ್ದು ತಪ್ಪಲ್ಲವೆನಿಸುತ್ತದೆ.

ಲಗ್ನದ ದಿನದ ಭೋಜನಕೂಟದಲ್ಲಿ ತೊಪ್ಪೆಯ ತಳ ಸೀದುಹೋದ ವಿವರವನ್ನಿತ್ತಿದಾಗ, ಸಾಹುಕಾರರು ಅದಕ್ಕಾಗಿ ಎಲ್ಲರ ಕ್ಷಮೆಯನ್ನೂ ಬೇಡುವುದಾಗಿ ತಿಳಿಸಿದರು. ಭೋಜನಕ್ಕೆ ಕುಳಿತವರ ಸಂಖ್ಯೆ ಎಷ್ಟೆಂಬ ಪ್ರಶ್ನೆಗೆ, “ಅದನ್ನು ತಿಳಿಸಲು ಸಾಧ್ಯವಿಲ್ಲ” ಎಂದು ಅವರು ಮಾಮೂಲು ಉತ್ತರವನ್ನು ದಯಪಾಲಿಸಿದರು, ಮಂತ್ರಿಗಳು ಯಾರೂ ಆರತಕ್ಷತೆಗೆ ಬಾರದಿದ್ದುದಕ್ಕೆ ಕೆಲವು ಪ್ರತಿನಿಧಿಗಳು ತಮ್ಮ ಆಶ್ಚರ್ಯವನ್ನೂ ಅಸಂತುಷ್ಟಿಯನ್ನೂ ವ್ಯಕ್ತಪಡಿಸಿದಾಗ, ಸಾಹುಕಾರರು, “ಆಗ ಇನ್ನೂ ಹೊಸ ಮಂತ್ರಿ ಮಂಡಲ ರಚನೆಯಾಗಿರಲಿಲ್ಲ; ಹಳಬರನ್ನು ಕರೆದರೆ, ಕಳೆ ಕಟ್ಟುವುದಿಲ್ಲ; ಹೊಸಬರು ಯಾರೆಂದು ನಿಷ್ಕರ್ಷೆಯಾಗುವತನಕ ಅವರಿಗೆ ಆಹ್ವಾನ ಪತ್ರಿಕೆಯನ್ನು ಖುದ್ದಾಗಿ ತಲುಪಿಸಲು ಸಾಧ್ಯವಾಗಲಿಲ್ಲ” ಎಂದು ವಿಷಾದದಿಂದ ಹೇಳಿಕೆಯಿತ್ತರು. ತಮ್ಮ ಎರಡನೆಯ ಮದುವೆಯಲ್ಲಾದರೂ ಈ ಕೊರತೆಯನ್ನು ನಿವಾರಿಸಲು ಸರ್ವವಿಧದಲ್ಲೂ ಪ್ರಯತ್ನಿಸುವುದಾಗಿ ಭರವಸೆಯನ್ನಿತ್ತರು.

“ಈ ಮದುವೆಯಿಂದ ನಿಮ್ಮ ಅಳಿಯನ ನೌಕರೀಸಂಪಾದನಾ ಸಾಹಸಕ್ಕೆ ಅನುಕೂಲವಾಗಿದೆಯೆ?” ಎಂಬ ಪ್ರಶ್ನೆಗೆ, ಸಾಹುಕಾರರು, “ಕಾದುನೋಡಿ” ಎಂದು ಹೇಳಿದರು.

—ಪಾಪಣ್ಣ.



ನಮ್ಮಣ್ಣನ ಆಕಾಶವಾಣಿ

ಟಿಕ್! ಟಿಕ್! ಟಿಕ್! ...ಯಾರಿಗೂ ಎಚ್ಚರವಾಗಲಿಲ್ಲ. ಅವರಿವರ ಹಗಲು ಗನಸು ಅವರವರಿಗೆ, ಉಂಡು ಮಲಗಿದ್ದ ಸಂಸಾರ.

"ಪೋಸ್ಟ್!" ..ಎಲ್ಲರಿಗೂ ಒಟ್ಟಿಗೆ ಎಚ್ಚರವಾಯಿತು. ನಾ ಮುಂದು ತಾ ಮುಂದು, ಎಂದು ಎಲ್ಲರೂ ಹೊಸ್ತಿಲ ಕಡೆಗೆ ಓಡಿದರು. ಟಪಾಲಿನವನು ಬಾಗಿಲ ಸಂದಿನಿಂದ ತೂರಿದ ಲಕ್ಕೋಟೆ, ಮರಿ, ನಾಣಿ, ಪಾತು, ಚಿಕ್ಕಮ್ಮ, ಅಮ್ಮ, ಅಪ್ಪ, ಇಷ್ಟು ಜನರ ಕೈಗೂ ಸಿಕ್ಕಲಿಲ್ಲ. ಅವರನ್ನೆಲ್ಲ ಪುನಲಾಯಿಸಿ, ಗುಂಪು ಕೂಡಿದ್ದ ಕಾಲುಗಳ ಸಂದಿನಿಂದ, ಮನೆ ನಾಯಿ ಜಿಮ್ಮಿ ಅದನ್ನು ಕಚ್ಚಿಕೊಂಡು, ರಸ್ತೆ ಕಡೆಗೆ ಓಡಿತು.

ಸರಿ! ಎಲ್ಲರೂ ಅತ್ತ ಕಡೆ, ಅದರ ಹಿಂದೆ, ಧಾವಿಸಿದರು. ದಾರಿಯಲ್ಲೋ, ಲಾರಿ ಸೈಕಲ್ಲು, ಕಾರು, ಜಟಕಾ—ಅವಾಂತರ. ಹೇಗೋ ಎಲ್ಲರೂ ಪ್ರಾಣಸಹಿತ ಉಳಿದರು. ಟಪಾಲಿನಲ್ಲಿ ಬಂದ ಕಾಗದದ ಮೂರು ಚೂರುಗಳು ಅಣ್ಣನಿಗೆ ದೊರೆಯಿತು.

ಅವುಗಳನ್ನು ಸೇರಿಸಿ ಅಂಟಿಸಿ ನೋಡುತ್ತ ..! ಅಣ್ಣ ಹೇಳಿದ, "ಶುದ್ಧ ಮೋಸ! ಇಷ್ಟೆಲ್ಲ ಆಯಾಸ ಪಟ್ಟಿದ್ದು ವ್ಯರ್ಥ! ಖಾಲಿ ಕಾಗದ, ಏನೂ ಬರೆದಿಲ್ಲ."

ಆಗ, ಅಮ್ಮನಿಗೆ ಹೊಳೆಯಿತು ಬುದ್ಧಿ. ಕಾಗದವನ್ನು ಮಗುಚಿದಳು. ಅತ್ತ ಕಡೆ, ಏನೋ ಬರೆದಿತ್ತು. "ಇತ್ತಕಡೆ ಬರೆಯದೆ ಅತ್ತ ಕಡೆ ಏಕೆ ಬರೆದ? ಮಂಕ! ಇದರಲ್ಲೇನೋ ಪಿತೂರಿ ಇರಬೇಕು" ಎಂದು ಅಣ್ಣ ತಲೆ ಕೆರೆದ. ಆಮೇಲೆ ಅದನ್ನೋದಿದ. ಅಣ್ಣನ ಮೂತಿ ಮತ್ತಷ್ಟು ಉದ್ದವಾಯಿತು.

"ಅಯ್ಯೋ ದೇವರೆ!" ಎಂದು ಅಣ್ಣ ಹೇಳಿ ಮುಗಿಸುವುದರೊಳಗೆ ಅಣ್ಣನ ಇಸ್ಪೀಟ್ ಸ್ನೇಹಿತ, ಪಕ್ಕದಮನೆ ಪಂಡಿತರು ಒಳಕ್ಕೆ ಬಂದರು. "ಏನಿದು ಅವಾಂತರ?" ಎಂದು ಕೇಳುತ್ತ, ಅವರು ತಮ್ಮ ಮಾಮೂಲು ಕುರ್ಚಿಯೊಳಕ್ಕೆ ಕುಸಿದರು.

"ನೋಡಿ, ಪಂಡಿತರೆ! ನಾನು ಆಕಾಶವಾಣಿಯಲ್ಲಿ ಭಾಷಣ ಕೊಡಬೇಕಂತೆ ಆಹಾರ ಸಮಸ್ಯೆ ಮೇಲೆ" ಎಂದ, ಅಣ್ಣ. ಪಂಡಿತರು ಎದ್ದು ಅಣ್ಣನ ಬೆನ್ನಮೇಲೆ ಬಲವಾಗಿ ಗುದ್ದಿದರು. "ತುಂಬಾ ಸಂತೋಷ! ಆಕಾಶವಾಣಿ ಭಾಷಣ ಅಂದ್ರೆ,

ಸಪ್ತ ಲೋಕಗಳಿಗೂ ಕೇಳಿಸುತ್ತದೆ; ಪ್ರಪಂಚದ ಜನರೆಲ್ಲ ಕಿವಿ ನೀಡುತ್ತಿರುತ್ತಾರೆ. ಏನು ಹೇಳುತ್ತೀರಿ, ಅಂತ. ಟ್ರೂಮನ್, ಐಸನ್ ಹೋವರ್, ಮಾವುತ್ಸೆ, ಪಿನಾಯಿ, ಬಿವಾನ್, ಕಡಿದಾಳ ಎಲ್ಲರೂ ಕೇಳುತ್ತಿರುತ್ತಾರೆ. ಅದೂ ಆಹಾರ ಸಮಸ್ಯೆ, ಅಡಿಗೆ ಮನೆ ಉಗ್ರಾಣ ಎರಡಕ್ಕೂ ಸಂಬಂಧಿಸಿದ್ದು. ಭಾಷಣವನ್ನ ಚೆನ್ನಾಗಿ ರಿಹರ್ಸ್ಟ ಮಾಡಬೇಕು" ಎಂದರು.

ಅಣ್ಣನಿಗೆ ಅರ್ಥವಾಗಲಿಲ್ಲ.. "ರಿಹರ್ಸ್ಲ, ಹಾಗೆಂದರೆ" ಎಂದು ಕಣ್ಣು ಬಿಟ್ಟ. ಅದಕ್ಕೆ ಪಂಡಿತರು, ರಿಹರ್ಸ್ಲ ಅಂದರೆ, ಹತ್ತಾರುಸಲ ಓದುವುದು, ಭಾವಕ್ಕೆ ಪುಷ್ಟಿ ಕೊಟ್ಟು, ಅರ್ಥವನ್ನರಳಿಸಿ, ಮಾತುಗಳನ್ನ ನಾಲಗೆಯಮೇಲೆ ಹೊರಳಿಸಿ, ಇತ್ಯಾದಿ. ಇಷ್ಟೇ ನಿಮಿಷ ಅಂತ ಕೊಟ್ಟಿರುತ್ತಾರೆ ನಿಮಗೆ, ನಿಮ್ಮ ಭಾಷಣಕ್ಕೆ....ಅಷ್ಟರೊಳಗೆ ಮುಗಿಯಬೇಕು ನಿಮ್ಮ ಸಮಸ್ಯೆ....ಮುಗಿಯದಿದ್ದರೆ, ಮುಗಿಸೇಬಿಡುತ್ತಾರೆ, ಸಿನಿಮ ಹಾಡು ಶುರು ಮಾಡೇಬಿಡುತ್ತಾರೆ" ಎಂದರು. ಅಣ್ಣ, ನಿಟ್ಟುಸಿರು ಬಿಡುತ್ತಾ, "ಅಯ್ಯೋ" ಎಂದ.

ಎರಡು ದಿನಗಳಾದಮೇಲೆ, ಪಂಡಿತರು ಬಂದು, ಎಲ್ಲಿ, ಪ್ರಾರಂಭಿಸಿ, ಎಂದು ಗಡಿಯಾರ ಹಿಡಿದುಕೊಂಡು ಅಣ್ಣನನ್ನು ಕರೆದರು. ಅಷ್ಟು ಹೊತ್ತಿಗೆ, ಅಣ್ಣನ ಆಹಾರ ಸಮಸ್ಯೆ ಆರೇಳು ರೂಪ ತಾಳಿತ್ತು. ಕುರುಡು ಪ್ರತಿ, ಕರುಡುಪ್ರತಿ, ಪೆನ್ ಸಿಲ್ ಪ್ರತಿ, ಶಾಯಿ ಪ್ರತಿ ಇಷ್ಟೂ ಆಗಿ, ಅಣ್ಣ ಕನ್ನಡ ಟೈಪ್‌ರೈಟರನ್ನು ಹುಡು ಕುವುದಕ್ಕೆ ಅರಾರಾ ಕಚೇರಿಗೆ ಹೊರಟಿದ್ದ. ಅಣ್ಣನ ಭಾಷಣವನ್ನೋದಿ ಅಮ್ಮ ಅಲ್ಲಲ್ಲಿ ಪುಟ ಪುಟಗಳನ್ನೇ ತಿದ್ದಿದ್ದಳು. ಅವುಗಳನ್ನೆಲ್ಲ ಅಣ್ಣ ಮತ್ತೆ ಅವಳಿಗೆ ಗೊತ್ತಿಲ್ಲದೆ ಬದಲಾಯಿಸಿ ಬರೆದಿದ್ದ.

ಇನ್ನೆರಡು ದಿನ ಕಳೆಯಿತು. "ಪಂಡಿತರೆ! ನಾನು ಸಿದ್ಧ" ಎಂದು ಅಣ್ಣ ಅವರೆದುರು ಕೂತ. "ಹುಂ! ಪ್ರಾರಂಭಿಸಿ ಎಂದು ಗಡಿಯಾರ ನೋಡುತ್ತ ಪಂಡಿ ತರು ಹಸುರು ಬಾವುಟ ಬೀಸಿದರು. ಅಣ್ಣ ಒಂದೇ ನಮೂನೆ ಅಕ್ಕಿ—ರಾಗಿ—ಗೋಧಿ—ಗೊಬ್ಬರ—ಗೋಮಯ ಎಂದು ಹೊರಟು, ಕೇಂದ್ರ ಸರ್ಕಾರದ ತನಕ ಬಂದ. ಪಂಡಿ ತರು, "ತಾಳು, ತಾಳು, ಮೊದಲಿನಿಂದ ಮತ್ತೆ ಪ್ರಾರಂಭಿಸು" ಎಂದರು. ಎಷ್ಟನೆಯ ಮಿನಿಟ್ಟಿಗೆ ಪ್ರಾರಂಭ ಎಂಬುದನ್ನ ಅವರು ಗುರುತು ಹಾಕಿಕೊಳ್ಳಲಿಲ್ಲವಂತೆ. ಮತ್ತೊಂದು ಬಾರಿ ರಿಹರ್ಸಲಾಯಿತು. ಕೇಂದ್ರ ಸರ್ಕಾರವನ್ನೂ ದಾಟಿ, ಪರದೇಶ ಗಳಿಂದ ಆಮದುಮಾಡಲು ವಾಹನ ಸೌಕರ್ಯಗಳ ಏರ್ಪಾಟಿಗೆ ಬಂದ, ಅಣ್ಣ. ಪಂಡಿತರು "**ಹೋಲ್ಡಾನ್**" ಅಂದರು. ಗಡಿಯಾರ ನಿಂತುಹೋಗಿತ್ತಂತೆ. ಮೂರ ನೆಯ ಸಲ, ಮಧ್ಯೆ, ಪಕ್ಕದಮನೆ ಹುಡುಗ ಕಾಫಿಪುಡಿ ಸಾಲಕ್ಕೆ ಬಂದ. ಐದ ನೆಯಬಾರಿ, ಅಣ್ಣನಿಗೇನೆ, ಆರುಸಾರಿ ಆಕಳಿಕೆ ಬಂತು. ಅವುಗಳಿಗಾಗಿ ಅಣ್ಣ ವಿನಿಯೋಗಿಸಿದ ನಿಮಿಷಗಳೆಷ್ಟು, ಅವನ್ನು ಒಟ್ಟು ಟೈಮಿಂದ ಕಳೆಯಬೇಕೆ ಬೇಡವೆ

ಎಂಬ ಚರ್ಚೆ ಬಿರುಸಾಯಿತು. ನಂತರ, ಅಣ್ಣ, ಕೈಗಳನ್ನು ಬೀಸುತ್ತ, ಕಣ್ಣುರುಳಿಸುತ್ತ, ನಡುವೆ ಮಂದಹಾಸ ಬೀರುತ್ತ, ಎದೆ ತಟ್ಟಿಕೊಂಡು, ಭಾಷಣವನ್ನು ಓದಿ ಮುಗಿಸಿದ, ಒಂದೇ ಉಸಿರಿನಲ್ಲಿ.

“ಎಷ್ಟಾಯಿತು?” ಎಂದು ಪಂಡಿತರನ್ನ ಕೇಳಿದಾಗ, “೩೫ ನಿಮಿಷ ತೆಗೆದುಕೊಂಡೆ; ೧೫ ನಿಮಿಷಕ್ಕಿಳಿಸಬೇಕು, ಅಂದ್ರೆ, ಇನ್ನೂ ವೇಗವಾಗಿ ಓದಬೇಕು; ಬಲು ನಿಧಾನ ನಿಮ್ಮ ಓದಾಣಿಕೆ” ಎಂದರು, ಪಂಡಿತರು.

ಅಣ್ಣ ಜಗ್ಗಲಿಲ್ಲ. ೨೫, ೨೨, ೧೮, ಹೀಗೆ ಓಡಿಸುತ್ತಾ ಹೋಗಿ, ಕಡೆಗೆ ೧೫ ರಲ್ಲೇ ಮುಗಿಸಿದ. ಆದರೆ, ಯಾರಿಗೂ ಏನೂ ಅರ್ಥವಾಗಲಿಲ್ಲ; ಯಾವ ಭಾಷೆ, ಯಾವ ವಿಷಯ, ಒಂದೂ ಪತ್ತೆಯಾಗಲಿಲ್ಲ. ಪಂಡಿತರಿಗೆ ಒಹಳ ಸಂತೋಷವಾಯಿತು. “ಇದೀಗ ಸರಿ! ಆಕಾಶವಾಣಿ ಭಾಷಣಗಳಲ್ಲಿ, ಅಲ್ಲಿಯ ಅಧಿಕಾರಿಗಳು ಮುಖ್ಯವಾಗಿ ಗಮನಿಸುವುದು ಟೈಂ! ಟೈಂ ಭರ್ತಿ! ಟೈಮಿಗೆ ಸರಿಯಾಗಿ ಮುಗಿಯುತ್ತದೋ ಇಲ್ಲವೋ ಎಂದು! ವಿಷಯ ಎಂಥಾದ್ದಾದರೇನು? ಅವರಿಗೇನು? ಭಾಷಣ ಕೇಳದೆ ಇರುವ ಮಹಾಜನಗಳಿಗೇನು? ಸಂಗೀತವನ್ನು ಜನ ಮೆಚ್ಚಲಿ ಅಂತಲೇ ಅವರು ಭಾಷಣಗಳನ್ನು ನಡುನಡುವೆ ಪ್ರಸಾರ ಮಾಡುವುದು” ಎಂದರು, ಪಂಡಿತರು.

ತನ್ನ ಪ್ರೋಗ್ರಾಂ ಇದ್ದದ್ದು ರಾತ್ರಿ ೮-೩೦ಕ್ಕೆ. ಆದರೂ, ಅಣ್ಣ ಅವತ್ತು ಅಲಾರಂ ಮಡಗಿ ಬೆಳಗ್ಗೆ ನಾಲ್ಕಕ್ಕೇನೆ ಎದ್ದು, ಚೌರ ಮಾಡಿಸಿಕೊಂಡು, ಸ್ನಾನ ಮುಗಿಸಿ, ದೇವಸ್ಥಾನಕ್ಕೆ ಹೋಗಿ ಬಂದು, ಬಿಸಿ ಬಿಸಿ ಇಸ್ತ್ರೀ ಬಟ್ಟೆ ತೊಟ್ಟು, ಮನೆಯಲ್ಲಿ ನಮ್ಮನ್ನೆಲ್ಲ ಗದರಿಸಿ, ಜಟಕಾ ತರಿಸಿ, ೫-೩೦ಕ್ಕೇನೇ ಸ್ಟೇಷನ್ ತಲಪಿದ.

ಅಲ್ಲಿ ಅಣ್ಣನನ್ನ ಒಂದು ಕೋಣೆಯೊಳಗೆ ಕೂಡಿಸಿ, ಅವರೆಲ್ಲರೂ ತಮ್ಮ ತಮ್ಮ ಕಾರ್ಯಗಳಿಗಾಗಿ ಹೊರಟುಹೋದರು. “ಅಯ್ಯೋ ದೇವರೇ, ನನ್ನ ಭಾಷಣ? ಮರೆತೇ ಹೋದನಲ್ಲಾ, ತರುವುದಕ್ಕೆ! ಈಗಲೇ ಹೊರಟು. . ಓಡಿ ಹೋಗಿ....” ಎಂದು ಗೋಳಿಡುತ್ತ, ಅಣ್ಣ ಅಲ್ಲಿಂದ ಯಾರಿಗೂ ತಿಳಿಯದೆ ಕಂಬಿಕಿತ್ತ, ೮-೧೫ಕ್ಕೆ.

೮-೨೮ಕ್ಕೆ ಕೋಣೆಯೊಳಕ್ಕೆ ಒಬ್ಬ ಗುಮಾಸ್ತೆ ನುಗ್ಗಿದ. “ಆಸಾಮಿ ಅದೃಶ್ಯ” ಎಂದು ಅವನು ಇನ್ನೊಬ್ಬ ಗುಮಾಸ್ತೆಯ ಹತ್ತಿರ ಪಿಸುಗುಟ್ಟಿದ. ಅದಕ್ಕವನು, “ಹಾ! ಅಂಥ ಅದೃಷ್ಟವೂ ನಮಗೆ ಉಂಟೆ?” ಎಂದು ಮೂಗಿನಮೇಲೆ ಬೆರಳಿಟ್ಟ.

ಸರಿ! ಅಣ್ಣನನ್ನು ನಾಲ್ಕು ಡ್ರೈವರುಗಳೂ ಮೂರು ಚಪ್ರಾಸಿಗಳೂ ಅಟ್ಟಿಸಿಕೊಂಡು ಬಂದರು, ಹಿಡಿದರು. ಅವನನ್ನು ಒಂದು ಕಾರಲ್ಲಿ ಕೂರಿಸಿ ೮-೩೦ಕ್ಕೆ ಸರಿಯಾಗಿ ಪ್ರಸಾರ ಕೋಣೆಯೊಳಕ್ಕೆ ದಬ್ಬಿದರು. ಮೊದಲೇ ತನ್ನ ಭಾಷಣದ ಪ್ರತಿ

ಯೊಂದನ್ನು ನಿಲಯಕ್ಕೆ ಕಳಿಹಿಸಿರುವುದನ್ನು ಅಣ್ಣ ಸಂಪೂರ್ಣ ಮರೆತಿದ್ದ : ಆ ಪ್ರತಿಯನ್ನು ಅಣ್ಣನ ಕೈಗೆ ಕೊಟ್ಟರು.

" .. ...(ಅದೇ ನಮ್ಮ ಅಣ್ಣನ ಹೆಸರು) ಆಹಾರ ಸಮಸ್ಯೆ ಎಂಬ ವಿಷಯವಾಗಿ ಭಾಷಣಮಾಡುವರು" ಎಂದು ಅಲ್ಲಿಯ ನೌಕರನೊಬ್ಬ ಜಗತ್ತನ್ನು ಎಚ್ಚರಿಸಿದ.

"ಅಹಂ.... ಹಂ.... ಹಾ.... ಹಂ...." ಎಂದು ಅಣ್ಣ ಉಪಕ್ರಮಿಸಿದ. ಗಂಟಲು ಬಿಟ್ಟುಕೊಂಡಿತು. ಬಿಟ್ಟುಕೊಂಡದ್ದೇ ತಡ, ಮೈಕಿಗೆ ಹಿಮ್ಮುಖವಾಗಿ ನಿಂತು, ಪಟಪಟನೆ, ಗಡಗಡನೆ, ಕನ್ನಂಬಾಡಿ ಕಬ್ಬಿಣದ ಬಾಗಿಲು ತೆರೆದಂತೆ, ಮುಂಗಾರ್ ಗೂಳಿ ಗುಟುರು ಹಾಕಿದಂತೆ, ಕಾಲ ಭೈರವನಿಗೆ ರೆಕ್ಕೆ ಮೂಡಿದಂತೆ, ಒಂದೇ ಉಸಿರಲ್ಲಿ, ಓದೇಬಿಟ್ಟ. ಮೈಯೆಲ್ಲ ಬೆವರು, ಕೈಎಲ್ಲ ನಡುಕ. ಕೆಂಪು ದೀಪ ಕಾಣಿಸಲೇ ಇಲ್ಲ; ಮೈಕ್ ಕಡೆ ತಿರುಗಲೇ ಇಲ್ಲ; ಪುಟಗಳೆಲ್ಲ ಅಸ್ತವ್ಯಸ್ತ. ಆದರೂ ಆಶ್ಚರ್ಯ! ಯಾರಿಗೂ ಐಬು ತಿಳಿಯಲಿಲ್ಲ....ಯಾರಿಗೂ, ಅಂದ್ರೆ, ಅಣ್ಣನ ಭಾಷಣವನ್ನು ಗ್ರಹಚಾರ ತಪ್ಪಿ ಕೇಳಿದ ಕಡುಪಾಪಿಗಳಿಗೂ.

(ಅನೇಕರು ಅಣ್ಣನ ಭಾಷಣವನ್ನು ಅಕಸ್ಮಾತ್ ಕೇಳಿ, ಇದು ಯಾವುದೋ ಮಧ್ಯ ಆಫ್ರಿಕಾದ ಹೊಸ ಸ್ಟೇಷನ್ ಎಂದುಕೊಂಡರಂತೆ. ಇನ್ನೂ ಅನೇಕರು ಮರುದಿನ ತಮ್ಮ ರೇಡಿಯೋಗಳನ್ನು ರಿಪೇರಿಗೆ ಕಳುಹಿಸಿದರಂತೆ. ನೂರಾರು ಮನೆಗಳಲ್ಲಿ ಮಕ್ಕಳು ಒಂದೇ ಸಮ ಕಿರಿಲಿದುವಂತೆ. ಖಾಯಿಲೆ ಮಲಗಿದ್ದ ಹತ್ತಾರು ಜನ ಅಣ್ಣನ ಭಾಷಣ ಕೇಳಿ ಹರಹರಾ ಎಂದರಂತೆ.)

ಅಣ್ಣನ ಭಾಷಣ ಮುಗಿಯಿತು, ಹನ್ನೊಂದೇ ನಿಮಿಷಗಳಲ್ಲಿ! ಗಾಬರಿಗೊಂಡ ಒಬ್ಬ ನೌಕರ ಅಣ್ಣನ ಹತ್ತಿರ ಬಂದು, ಅವನ ಕಿವಿಯಲ್ಲಿ, "ಹೇಳಿ ಇನ್ನೂ! ಇನ್ನೂ ನಾಲ್ಕು ನಿಮಿಷ ಇದೆ" ಎಂದನಂತೆ. ಆದರೆ, ಅಣ್ಣನ ಹತ್ತಿರ ಸರಕೇ ಇಲ್ಲ; ಅವನ ಮೆದುಳು ಬತ್ತಿಹೋಗಿತ್ತು. "ಅಯ್ಯೋ! ದೇವರೇ! ಮುಗಿದೇಹೋಯ್ತೆ, ಇಷ್ಟು ಬೇಗ?" ಎಂದು ಅಣ್ಣ ಗಟ್ಟಿಯಾಗಿ ಗೊಣಗಿದ. ನೌಕರ ಅವನ ಬಾಯಿಗಡ್ಡ ಅಂಗೈ ಅದುಮಿದ. "ಹೇಳಿ ಏನಾದರೂ! ಹೇಳುತ್ತಾ ಹೋಗಿ; ಒಂದು ಕತೆ ಹೇಳಿ, ಒಂದು ಸಮಸ್ಯೆ ಬಿಡಿಸಿ" ಎಂದು ಆತ ಅಂಗಲಾಚಿದ; ಅಣ್ಣನ ಕಾಲಿಗೆ ಬಿದ್ದ, ಸದ್ದುಮಾಡದೆ.

ಅಣ್ಣನಿಗೂ ಆಗಾಗ ಸ್ಫೂರ್ತಿ ಬರುತ್ತೆ. ಆಗ—ಬಂತು! ಕೊನೆಗೆ ಬಿದ್ದಿದ್ದ ಕಾಗದಗಳನ್ನೇ ಮತ್ತೆ ಎತ್ತಿ, ಹಳೆಯ ಭಾಷಣದಿಂದಲೇ, ನಾಲ್ಕು ಪುಟಗಳನ್ನು ಮತ್ತೆ ಓದಿ, ಅಣ್ಣ ಪಾರಾದ.

—ಪುಟ್ಟಪಾಪು.

ನಮಗೆ ಬಂದ ಪತ್ರ

ಸಂಪಾದಕರ ಸಮುಕ್ಷಮದಲ್ಲಿ,

ಸ್ವಾಮಿಾಜೀ.

ನಮ್ಮ ವಠಾರದ ಹುಡುಗರಿಗೆಲ್ಲಾ ಈಗ ಬೇಸಿಗೆ ರಜಾ ಬಂದಿದೆ, ಅವರಕಾಟ ಮನೆಯವರಿಗೆ ತಪ್ಪಲಿ ಎನ್ನುವ ಸದುದ್ದೇಶದಿಂದ ಹುಡುಗರೆಲ್ಲರಿಗೂ ರಾಮಭಜನ ಸಭೆಯಲ್ಲಿ ದಿನಾಲೂ ನಾನು ವ್ಯಾಸಂಗ ಹಾಗೂ ಮನರಂಜನೆಯ ಕಾರ್ಯಗಳನ್ನು ಏರ್ಪಡಿಸಬೇಕೆಂದು, ವಠಾರದ ಗೃಹಿಣಿಯರೆಲ್ಲರೂ ನಮ್ಮಾಕೆಯನ್ನು ಒತ್ತಾಯಮಾಡಿ ದುದರಿಂದಲೂ ಆಕೆಯು ನನಗೆ ಆಣತಿ ಇತ್ತುದರಿಂದಲೂ, ಗೃಹಶಾಂತಿಗಾಗಿ ನಾನು ಒಪ್ಪಿಕೊಂಡೆ.

ನಮ್ಮ ಸರ್ಕಾರದವರು ಅಕ್ಕಿಬೆಲೆಯನ್ನು ಏರಿಸಿದುದು ನಿಮಗೆ ತಿಳಿದೇ ಇರ ಬೇಕು. ಇದರ ವಿಷಯವಾಗಿ ದೈನಂದಿನ ಪತ್ರಿಕೆಗಳಲ್ಲಿ ಬಂದ ಸಲಹಾರೂಪ ಟೀಕೆಗಳು ಹೇರಳ. ಈ ಟೀಕೆಗಳನ್ನು ಕ್ರೂಢಿಕರಿಸಿ, ಸಲಹೆಗಳಿಂದ ಆಗಬಹುದಾದ ಉಳಿತಾಯವನ್ನು ಲೆಕ್ಕಮಾಡಿ, ಸಂಕ್ಷಿಪ್ತ ವರದಿಯೊಂದನ್ನು ತಯಾರು ಮಾಡಿದರೆ, ನಮ್ಮ ಘನ ಸರ್ಕಾರಕ್ಕೆ ಬಹಳ ಉಪಯೋಗವಾಗಬಹುದು. ಹಾಗೂ ಹುಡುಗರಿಗೆ ಪ್ರಜಾ ಪ್ರಭುತ್ವದ ಪಾಠಗಳನ್ನು ಹೇಳಿಕೊಟ್ಟ ಹಾಗೂ ಆಗುತ್ತೆ. ಅಂದಮೇಲೆ ಮನರಂಜನೆ ಆಗಿಯೇ ಆಗುತ್ತೆ ಅಂತ ಬೇರೆ ಹೇಳಬೇಕಾಗೇ ಇಲ್ಲ. ಹಾಗಾಗಿ ಬಂದ ಪತ್ರಿಕೆಗಳ ಟೀಕೆಗಳೆಲ್ಲವನ್ನೂ ಸಂಕ್ಷಿಪ್ತವಾಗಿ ಕ್ರೂಢೀಕರಿಸಿರೆಂದು ಹುಡುಗರಿಗೆ ಹೇಳಿದೆ. ಅವರು ತಯಾರಿಸಿದ ವರದಿ ಹೀಗಿದೆ.

೧) ೬ ಸಚಿವರನ್ನು ಮೂರು ಮಾಡಿ.
ವರ್ಷಕ್ಕೆ ಉಳಿತಾಯ. ಹೆಚ್ಚು ಅಂದರೆ ೩೦,೦೦೦ ರೂ.

೨) ಟೀ ಕೂಟಗಳನ್ನು ಬಂದು ಮಾಡಿ.
ವರ್ಷಕ್ಕೆ ಉಳಿತಾಯ ಹೆಚ್ಚು ಹೆಚ್ಚು ಅಂದರೆ ೧೩,೦೦೦

೩) ಡೆಪ್ಯುಟಿ ಸಚಿವರನ್ನು ನೇಮಿಸಬೇಡಿ
ಉಳಿತಾಯ...............?

೪) ಪಾನನಿರೋಧ ಪೂರ್ಣ ತೆಗೆಯಿರಿ.
ವರಮಾನ ಬರಬಹುದಾದ್ದು.
ಅ) ಚಿನ್ನದ ಗಣಿ ಹೆಸರಿಗೆ ತಕ್ಕಂತಿದ್ದರೆ — ೫೦ ಲಕ್ಷ.
ಆ) ಶಿವಮೊಗ್ಗ ಭದ್ರಾವತಿ ಕೂಡಿ — ೨ ಲಕ್ಷ.

೩) ಮಿಕ್ಕ ಮೂರು ಡಿಸ್ಟ್ರಿಕ್ಟ್‌ಗಳು, ತಲಾ ೨ ರಂತೆ ೬ ಲಕ್ಷ.

ಒಟ್ಟು ೫೮—ಅಥವಾ ಬಂದಾ ೬೦ ಲಕ್ಷ.

೫) ಸಿನಿಮಾ ತೆರಿಗೆ ಹೆಚ್ಚು ಮಾಡೋದು.

ಈಗ ನೂರು ಜನ ಸಿನಿಮಾಗೆ ಹೋಗಿ ೧೦೦ ರೂ. ತೆತ್ತರೆ, ತಿಂಗಳಿಗೆ

ಆಗ ೫೦ ಜನ ಸಿನಿಮಾಗೆ ಹೋಗಿ ೭೫ ತೆರುತ್ತಾರೆ.

ಅಥವಾ ಆ ರೀತಿಯಲ್ಲಿ

ಅಂದರೆ (ಸಂಸ್ಥಾನಾದ್ಯಂತ) ಒಟ್ಟು ನಷ್ಟ ಸುಮಾರು ೩ ಲಕ್ಷ.

೬) ಮದುವೆ ಮುಂಜಿಗಳಲ್ಲಿ ಓದಿಸುವ ವಸ್ತುಗಳ ಮೇಲೆ ತೆರಿಗೆ.

ಇದು ಸುಮಾರು ವರ್ಷಕ್ಕೆ ೨ ಲಕ್ಷ ಕೊಡಬಹುದು

ಆದರೆ ಸರ್ಕಾರದ ಪರವಾಗಿ ಮದುವೆ ಮುಂಜಿ ಮನೆಗಳಿಗೆ ಹೋಗಿ ಸರ್ವಕಾವಲು ಕಾಯಬೇಕಾದ ಸಿಬ್ಬಂದಿ ಖರ್ಚು ೨ ಲಕ್ಷ.

ಒಟ್ಟು ಉಳಿತಾಯ, ಸುಮಾರು ಸೊನ್ನೆ.

೭) ಎಲೆ ಅಡಿಕೆ ಮೇಲೆ ತೆರಿಗೆ.

ಸಾಬಿ, ಮಾರಿದ ಬೀಡಾಕ್ಕೆ ಒಂದು ಕಾಸಿನಂತೆ

ಬಳೆ ಶಬ್ದದ ಜತೆಗೆ ಬಂದ ಬೀಡಾಕ್ಕೆ ಒಂದು ಆಣೆ.

ಸುಗುಣ ವಾತಾವರಣದ ಬೀಡಾಕ್ಕೆ ಎರಡಾಣೆ.

ಮಿಕ್ಕ ವಾತಾವರಣದ ಬೀಡಾಕ್ಕೆ ನಾಲ್ಕಾಣೆ.

ಒಟ್ಟು ಬರಬಹುದಾದ ವರಮಾನ ೪ ಲಕ್ಷ.

ಸಿಬ್ಬಂದಿ ಖರ್ಚು—	೬ ಲಕ್ಷ
—ಸಿಬ್ಬಂದಿಯ ವರಮಾನ ತೆರಿಗೆಯಿಂದ ಆದಾಯ	೧ ಲಕ್ಷ
ಇತ್ಯಾದಿ, ಇತ್ಯಾದಿ. ಒಟ್ಟು ನಷ್ಟ	೧ ಲಕ್ಷ

ಒಟ್ಟನಲ್ಲಿ ೫೭ ಲಕ್ಷ ೪೩ ಸಾವಿರ ರೂಪಾಯಿ ಬರಬಹುದು—ನಮಗೆ ಈಗಿರುವ ನಷ್ಟ ೩೫೦ ಚಿಲ್ಲರೆ ಲಕ್ಷ—ಅಂದರೆ ಈ ಬಾಬುಗಳನ್ನು ಮಾಡಿ—ಅಕ್ಕಿ ಬೆಲೆಯನ್ನು ಏರಿಸಿದರೆ, ಲೆಕ್ಕ ಸರಿತೂಗಿಸಬಹುದು ಎಂಬ ಅಭಿಪ್ರಾಯ ಬರುವಹಾಗಾಗಿದೆ.

ಸಂಪಾದಕರೇ! ಇದನ್ನು ಪೂರ್ಣ ವರದಿ ಕಳಿಸಿದರೆ ನಿಮಗೂ ಬೇಜಾರಾಗಬಹುದು ಅಂತ ಇಷ್ಟಕ್ಕೇ ನಿಲ್ಲಿಸಿದೇನೆ. ನಮ್ಮ ಘನ ಸರ್ಕಾರಕ್ಕೆ ಇದನ್ನು ಕಳಿಹಿಸುವ ಬದಲು ನಿಮಗೆ ಕಳಿಸಿದರೆ ಪ್ರಯೋಜನ ವಾದೀತು. ಎಂದು ನಿಮಗೆ ಕಳಿಸಿದ್ದೇನೆ.

ಇತಿ, ನಿಮ್ಮ ಶ್ರೇಯೋಭಿಲಾಷಿ,

ಶಾಮರಾಯ.

[ಪೂರ್ಣ ವರದಿಯನ್ನೇ ಕಳಿಸಪ್ಪಾ! ನೋಡೇಬಿಡೋಣ. ಸಂ.]

ವೈದ್ಯರ ವೈದ್ಯ

ಮನಶ್ಶಾಸ್ತ್ರದಲ್ಲಿ ಪ್ರವೀಣರೊಬ್ಬರಿದಾರೆ. ಇತರರ ನುಡಿ ನಮ್ಮ ನಡೆ ಇವುಗಳಲ್ಲಿ ಏನು ವಿಶೇಷ ಕಂಡುಬಂದರೂ, ಅವರು ಅದಕ್ಕೆ ಶಾಸ್ತ್ರೀಯವಾದ ಮೂಲ ಹುಡುಕಿ ಹೇಳುತ್ತಾರೆ. ಮಗುತನದಲ್ಲಿ ನಮಗೆ ಉಂಟಾದ ಯಾವುದೋ ಭಯ ಭೀತಿ ಅನಾಹುತ ಆತಂಕ ಇವುಗಳಿಂದಲೇ, ಬೆಳೆಯುತ್ತ ಬೆಳೆಯುತ್ತ ನಮ್ಮಲ್ಲಿ ಅನೇಕ ರೀತಿಯ ಆಸೆ ಪ್ರತ್ಯಾಸೆಗಳು ಕಂಡುಬರುತ್ತವೆ, ಎಂಬುದು ಅವರ ಮತ. (೧) ಪರೀಕ್ಷೆಗೆ ಕೂತ ಹುಡುಗ ಬೆವರುವುದೇಕೆ? (೨) ಕಾಶಿಯಾತ್ರೆಗೆ ಹೊರಟ ಹುಡುಗ ಹಿಂತಿರುಗದೆ ಯಾವುದೋ ಜಗಳ ಎತ್ತಿ ಪರಾರಿಯಾಗುವುದೇಕೆ? (೩) ಸಂಗೀತ ಎಂದರೆ ಹಲವರು ಸಾವಿರ ಮೈಲಿ ದೂರ ಓಡುವುದೇಕೆ? (೪) ಹಲ್ಲು ವೈದ್ಯರನ್ನು ಕಂಡರೆ ಹೆದರುವುದೇಕೆ? (೫) ಬಟ್ಟತಲೆ ಕಂಡರೆ ಕೆಲವರು ನಗುವುದೇಕೆ? (೬) ತಬಲ ಬಾರಿಸುವುದನ್ನೇ ಕನಬಾಗಿ ಕೆಲವರು ಆರಿಸುವುದೇಕೆ? (೭) ಹಾಗಲ ಕಾಯಿ ಕಂಡರೆ ಹಲವರು ಹಾ ತೊರೆಯುವುದೇಕೆ? (೮) ಆಳವಾದ ಬಾವಿ ಕಂಡರೆ ಧುಮುಕೇ ಬಿಡೋಣವೆಂದು ಕೆಲವರಿಗೆ ಅನ್ನಿಸುವುದೇಕೆ? (೯) ಬಸ್ ಪ್ರಯಾಣ ಮಾಡುವಾಗ, ಕೆಲವರು ವಾಂತಿಮಾಡುವುದೇಕೆ? ಇವೇ ಮುಂತಾದ ಪ್ರಶ್ನೆಗಳಿಗೆಲ್ಲ ಅವರು ಉದ್ದುದ್ದ ಉತ್ತರಗಳನ್ನು ಬರೆದು ಪ್ರಕಟಿಸಿ, ತುಂಬ ಆನಂದವನ್ನು ಅನುಭವಿಸುತ್ತಿದಾರೆ. ಅವರ ಉತ್ತರಗಳೆಲ್ಲವೂ, ಆಯಾ ಪ್ರಾಶ್ನಿಕರ ಮಗುತನದ ಅನುಭವಗಳಿಗೆ ಸಂಬಂಧಿಸಿದ್ದೇ. ಉದಾಹರಣೆಗೆ.

(೧) ಮೊದಲಸಲ ಅಕ್ಷರಾಭ್ಯಾಸ ಮಾಡಿದಾಗ, ಹುಡುಗನ ಕೈಬೆರಳನ್ನು ಮೇಷ್ಟರು ಮಡಿಚಿ ನೋಯಿಸಿದರು, (೨) ಕಾಶೀಪತಿ ಎಂಬ ಹೆಸರಿನ ಹುಡುಗ ಆ ವರನಿಗೆ ಚಿಕ್ಕಂದಿನಲ್ಲಿ ತುಂಬಾ ದೋಸ್ತಿಯಾಗಿದ್ದ; (೩) ಹುಡುಗನ ತಾಯಿ ಜೋ ಜೋ ಹಾಡಿ ಅವನ ತೊಟ್ಟಿಲನ್ನು ತೂಗುತ್ತಿದ್ದರು; (೪) ಹಲ್ಲೂ ಹಲ್ಲೂ ಎಂದು ಜಟಕಾದವನಿಗೆ ಎಚ್ಚರಿಕೆ ಕೊಡುತ್ತಿದ್ದರೂ, ಹುಡುಗನ ಚಿಕ್ಕವಯಸ್ಸಿನಲ್ಲಿ ಅದು ಮಗುಚಿ ಮಗುವಿಗೆ ಜಖಂ ಆಯಿತು, (೫) ಹುಡುಗನ ತಾತನಿಗೆ ಬಟ್ಟತಲೆ ಇತ್ತು, ಅದರ ಮೇಲೆ ಹೇನು ಹರಿದದ್ದನ್ನು ಅವನು ಎಳೆವಯಸ್ಸಿನಲ್ಲಿ ನೋಡಿದ್ದ; (೬) ಹುಡುಗನನ್ನು ಮಗುಚಿ ಮಲಗಿಸಿ ತಂದೆ ತಾಯಂದಿರು ಬೆನ್ನುಕಟ್ಟಿ ನಿದ್ದೆ ಮಾಡಿಸುತ್ತಿದ್ದರು, (೭) ಹಾಗಲವಾಡಿಯಲ್ಲೇ ಅವನ ತಾಯಿ ಕೆಲದಿನ ಇದ್ದರು; (೮) ನಿನ್ನ ಭಾವೀಯಶಸ್ಸನ್ನು ನೀನೇ ನೋಡಿಕೊಳ್ಳೋ ಎಂದು ಅವನು ಮಗುವಾಗಿದ್ದಾಗ, ತಾತ ಬೋಧನೆ ಮಾಡುತ್ತಿದ್ದ; (೯) ಹುಡುಗನ ತಂದೆ ಬಸ್ ಪ್ರಯಾಣ ಮಾಡಿದಾಗಲೆಲ್ಲ ವಾಂತಿ ಮಾಡುತ್ತಿದ್ದರಾದ್ದರಿಂದ, ಮಗುತನದಲ್ಲೇ ಅದು, ವಾಂತಿ ಮಾಡುವುದೇ ನ್ಯಾಯ, ವಾಂತಿ ಮಾಡುವುದೇ ಧರ್ಮ, ವಾಂತಿ ಮಾಡದೆ ಇದ್ದರೆ ಗಂಭೀರನಡತೆ ಅಲ್ಲ ಎಂದು ತಿಳಿದು ಕೊಂಡು ಬಿಟ್ಟಿತು—ಇತ್ಯಾದಿ ಉತ್ತರಗಳ

ವೈಖರಿಯನ್ನು ಅವರ ಲೇಖನಿಯಿಂದ ತಿಳಿಯ ಬೇಕು! ಬಲು ಚಮತ್ಕಾರ, ಆಸಾಮಿ ಯದು. ಕಾವ್ಯಪ್ರತಿಭೆ, ಲಂಗು ಲಗಾಮಿಲ್ಲದ ಭಾವನಾ ಶಕ್ತಿ ಅಂದರೆ, ಅವರದು.

ಹೇಳಿಕೊಳ್ಳೊದಕ್ಕೆ ನಾಚಿಕೆ ಏನು?

ನಾನೂ ಒಬ್ಬ ಮನಶ್ಶಾಸ್ತ್ರಿ, ನನ್ನ ಕಸಬು, ಮನಶ್ಶಾಸ್ತ್ರಿಗಳ ಮನಸ್ಸನ್ನು ವಿವೇಚನೆ ಮಾಡಿ, ಅವರ ನಡೆನುಡಿಗಳಲ್ಲಿ ಕಂಡು ಬರುವ ವೈಶಿಷ್ಟ್ಯ ವಕ್ರತೆಗಳಿಗೆ ಮೂಲಕಾರಣಗಳು ಏನು, ಎಂಬುದನ್ನು ಹುಡುಕಿ ತೆಗೆದು ಅವರಿಗೆ ತಕ್ಕ ಚಿಕಿತ್ಸೆ ಹೇಳುವುದು. ಇದರಲ್ಲಿ ನಾನು ಪ್ರವೀಣನೆನಿಸಿ ಕೊಂಡಿದ್ದೇನೆ.

ನನ್ನ ಕೈಗೆ ಈ ಮನಶ್ಶಾಸ್ತ್ರೀನೂ ಸಿಕ್ಕಿದ. ಅವನ ಉಡುಪು, ಅವನು ನಡೆಯು ವಾಗ ಎಡತೋಳನ್ನು ಬಗ್ಗಿಸಿ ಬಲಮುಂಡಿಯನ್ನು ಡೊಂಕಿಸುವ ರೀತಿ, ಅವನು ಶಾಲೆ ಯಲ್ಲಿ ಬೆಂಚಿನಮೇಲೆ ನಿಂತ ನಿಲುವು, ಅವನು ಪರೀಕ್ಷೆಯಲ್ಲಿ ಹೊಡೆದ ಕಾಪಿ, ಅವನು ಮದುವೆಗೊಪ್ಪಿದ ತಂತ್ರ, ಇವನ್ನೆಲ್ಲ ನಾನು ಕೂಲಂಕಷವಾಗಿ ಪರಿಶೀಲಿಸಿ, ಚಿಕಿತ್ಸೆ ನಡೆಸಿದೆ.

ಇತರರು ಹೇಗಾದರೂ ಇದ್ದುಕೊಳ್ಳಲಿ, ನನ್ನ ತಪ್ಪುಗಳನ್ನು ನಾನು ತಿದ್ದು ಕೊಳ್ಳುತ್ತೇನೆ, ಎಂಬ ಬುದ್ಧಿ ಇಲ್ಲದೆ, ಕಂಡ ಕಂಡವರನ್ನೆಲ್ಲ ಟೀಕಿಸಿ, ಅವರನ್ನು ತಿದ್ದಲು ಹೊರಡುವ ಆತ—ಏಕೆ ಹೀಗಾದ?, ಎಂದು ನಾನು ವಿಚಾರಮಾಡಿದೆ.

ಕೊನೆಗೆ, ನನಗೆ ಆತನ ಮನೋರೋಗದ ಮೂಲಕಾರಣ ಸಿಕ್ಕಿತು, ಬ್ಯಾಂಕ್ ಕೌಂಟರಿಂದ ಒಬ್ಬ ಸಾವಿರ ರೂಪಾಯಿ ಗಂಟನ್ನು ಕದ್ದ, ಅನ್ನಿ. ಗಲಾಟೆ, ಗಲಭೆ ಪ್ರಾರಂಭ ಆಗುತ್ತಲೂ, ಆತ ಏನು ಮಾಡುತ್ತಾನೆ? ಹಿಡಿಯಿರಿ, ಹಿಡಿಯಿರಿ, ಓಡುತ್ತಾ ಇದಾನೆ, ಅಕೋ ಅಲ್ಲಿ, ಕಳ್ಳ, ಅವನೇ, ಅಂತ ಅವನೂನೂ ಇತರರ ಸಂಗಡ ಕಳ್ಳನನ್ನು ಹುಡುಕುತ್ತಾನೆ, ಅಲ್ಲವೆ? ಏಕೆ? ತನ್ನ ಮೇಲೆ ಯಾರದೃಷ್ಟಿಯೂ ಬೀಳದಿರಲಿ, ಅಂತ.

ಹಾಗೆಯೇ, ಆ ಮನಶ್ಶಾಸ್ತ್ರಿಯೂ ಕೂಡ, ಇತರರ ಮನೋರೋಗಗಳನ್ನು ವಾಸಿಮಾಡುತ್ತೇನೆ ಅಂತ ಏಕೆ ಕಂಕಣ ಬಿಗಿದುಕೊಂಡಿದಾನೆ, ಅಂದ್ರೆ, ತನ್ನ ವಕ್ರತೆ ಕಡೆ ಯಾರೂ ನೋಡದೆಯಿರಲಿ, ಎನ್ನುವುದಕ್ಕೋಸ್ಕರ. ಆದ್ದರಿಂದಲೇ, ಆತ ಮನಶ್ಶಾಸ್ತ್ರವನ್ನು ಅಭ್ಯಾಸಮಾಡಿದ್ದು; ಇತರರ ನಡೆ ನುಡಿಗಳನ್ನು ಟೀಕಿಸಲು ಹೊರ ಟಿರುವುದು, ಎಂದು ನಾನು ಕಂಡು ಹಿಡಿದಿದೇನೆ.

ಆದರೆ ಒಂದು ಮಾತು. ಇಂಥವರೆಲ್ಲ ಏಕೆ ಹೀಗಾದರೂ ಎಂದು ಹುಡುಕಿ ಹೇಳುವ ನಾನೇಕೆ ಹೀಗಾದೆ, ಎಂದು ಮಾತ್ರ ನೀವು ಹುಡುಕಲು ಹೊರಡಬೇಡಿ, ದಯವಿಟ್ಟು.

ಪುಬ್ಬಾಶಾಸ್ತ್ರಿ.

—o—

ಮನೆಗೆ ಶಾಂತಿ ! ಮನಕ್ಕೆ ಶಾಂತಿ !! ದೇಹಕ್ಕೆ ವಿಶ್ರಾಂತಿ !!!

ಕಣ್ಮನಗಳಿಗೆ ತಂಪು ಬೀರುವುದು.

ದೇದೀಪ್ಯಮಾನ

ಮೈಸೂರು ಬಲ್ಬು



ಅದು ಭಾರತದ್ದು !

ಸುಲಭ ಬೆಲೆಯದು !

ಹೆಚ್ಚು ಬಾಳಿಕೆ ಬರುವುದು !!

ಫೋನ್: 2026 ಗ್ರಾಮ್ಸ್: 'Mysorlamp'

o

ಮೈಸೂರು ಲ್ಯಾಂಪ್ ವರ್ಕ್ಸ್ ಲಿ.,

ಮಲ್ಲೇಶ್ವರಂ : : : : ಬೆಂಗಳೂರು-3

ಬರಲಿದೆ!

ಮಾನವನ ಮೂಲ ಮನೋಭಾವಗಳ ವೈಚಿತ್ರ್ಯವನ್ನು ನಿರೂಪಿಸುವ ಕಲಾನಿಧಿ...ಆದರ್ಶ ಸಾಧನೆ ಸ್ಫೂರ್ತಿ ನೀಡುವ ಕೃತಿ...ಮನೋಹರ ನೃತ್ಯ-ಸಂಗೀತಯುತ ಸೊಬಗಿನ ಖನಿ



ಶುಭೋದಯಾರವರ

ಆದರ್ಶಂ [ತೆಲುಗು]

ತಾರಾಗಣ : **ಜಾನಕಿ, ಸಾವಿತ್ರಿ, ರೇವತಿ, ಜಗ್ಗಯ್ಯ, ರಾಮಶರ್ಮ, ಆತ್ರೇಯ, ಗೌರೀನಾಥಶಾಸ್ತ್ರಿ, ಕೃಷ್ಣ**

ರಚನೆ : **ಆತ್ರೇಯ** ಛಾಯಾಗ್ರಹಣ : **ಅನ್ನಯ್ಯ** ಸಂಗೀತ : **ಅಶ್ವತ್ಥಾಮ**

ನಿರ್ದೇಶನ : **ಹೆಚ್. ವಿ. ಬಾಬು.**

Distributors for Mysore State, South Canara & Coorg.

VIJAYALAKSHMI & Co.,

Gandhinagar, : : Bangalore-2.



ಕೊರವಂಜಿ

ಬಳೇಪೇಟೆ · · ಬೆಂಗಳೂರು 2

o —

ಬಿಡಿ ಪ್ರತಿ ಕೇವಲ ನಾಲ್ಕಾಣೆ

ವಾರ್ಷಿಕ ಚಂದಾ: ಕೇವಲ 3 ರೂ ಗಳು (ಅಂಚೆ ವೆಚ್ಚ ಸಹಿತ)


ನಮ್ಮ ಹೊಸ ಮಾರಾಟಗಾರರು:

Sri. S BHAGAVANTH SHANBHOGHA,
Sri Anjaneya Store,
Saligrama S. (Kanara)

M/s. D GANAPATHI RANADE
Lakkavalli

M/s M R KESHAVASETTY & BROS,
Davangere.

M/s BASAVESWARA NEWS AGENCY,
Bagalkot.



ಪ್ರತಿಕೆಲಸಕ್ಕೂ ಪ್ರತ್ಯೇಕವಾದ
ಷಾಲಿಮಾರ್ ಪೇಯಿಂಟ್
ಇದೆ
ಜಾಣರು ಷಾಲಿಮಾರ್ ಪೇಯಿಂಟನ್ನೇ
ಉಪಯೋಗಿಸುತ್ತಾರೆ
SPX 83A-KN
SHALIMAR PAINT
SHALIMAR PAINT, COLOUR & VARNISH CO., LTD.
POST BOX 136, MADRAS 1


In your
Make-up
Locks
Count
a lot...
RAJA
AMLA
HAIR OIL
"HELPS YOU
TO KEEP
LOCKS OF
LOVELY AND
LUSTROUS
HAIR"
MANYAM & CO.,
BANGALORE - MADRAS - MADURA - BOMBAY.